ಕೇಂದ್ರದ ಸಹಾಯಕ ಪ್ರಾಧ್ಯಾಪಕರಾದ ಡಾ.ಕುಮಾರ ಬಿ.ಎಂ. ಅವರು ದಿನಾಂಕ 30 ಮತ್ತು 31 ಮಾರ್ಚ್ 2017 ರಂದು ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ, ನಡೆದ ರಾಷ್ಟ್ರೀಯ ಸಮ್ಮೇಳನದಲ್ಲಿ ''ವಿಶ್ವ ವ್ಯಾಪಾರ ಸಂಘಟನೆ ಮತ್ತು ಕೃಷಿ ಮೇಲಿನ ಒಪ್ಪಂದ ಒಂದು ವಿಶ್ಲೇಷಣೆ: ಭಾರತದ ಕೃಷಿ ಅರ್ಥಶಾಸ್ತ್ರದ ಪರಿಸ್ಥಿತಿ'' ಎಂಬ ವಿಷಯದ ಬಗ್ಗೆ ಪ್ರಬಂಧವನ್ನು ಮಂಡಿಸಿರುತ್ತಾರೆ.

ಕೇಂದ್ರದ ಪೋಸ್ಟ್ ಡಾಕ್ಟರಲ್ ಪೆಲೋ ರಾದ ಡಾ. ಶೀಕ್ರಾಂತ ನಾಯಕ ಜಿ. ಅವರು ದಿನಾಂಕ 1 ಮತ್ತು 2 ಜೂಲೈ 2016 ರಂದು ಸಿ.ಎಸ್.ಇ.ಐ.ಪಿ., ಯುನಿವರ್ಸಿಟಿ ಆಫ್ ಮೈಸೂರು ನಲ್ಲಿ ನಡೆದ ರಾಷ್ಟ್ರೀಯ ಸಮ್ಮೇಳನದಲ್ಲಿ ''ಬುಡಕಟ್ಟು ಪ್ರದೇಶಗಳಲ್ಲಿ ಕಿರು ಅರಣ್ಯ ಉತ್ಪನ್ನಗಳ ಸಂಗ್ರಹಣೆ ಮತ್ತು ನೈಪುಣ್ಯತೆ ಅಭಿವೃದ್ದಿ ಯೋಜನೆಗಳ ವಿಶ್ಲೇಷಣೆ'' ಎಂಬ ವಿಷಯದ ಬಗ್ಗೆ ಪ್ರಬಂಧವನ್ನು ಮಂಡಿಸಿರುತ್ತಾರೆ.

ಕೇಂದ್ರದ ಪೋಸ್ಟ್ ಡಾಕ್ಟರಲ್ ಪೆಲೋ ರಾದ ಡಾ. ಶೀಕ್ರಾಂತ ನಾಯಕ ಜಿ. ದಿನಾಂಕ 6 ಅಗೋಸ್ಟ್ 2016 ರಂದು ಕರ್ನಾಟಕ ಸ್ಟೇಟ್ ಯುತ್ ನಾಯಕಸ್ ಗ್ರೂಪ್, ರಾಣಿ ಬಹದ್ದೂರ್ ಅಡಿಟೊರಿಯಂ ಯುನಿವರ್ಸಿಟಿ ಆಫ್ ಮೈಸೂರ್, ಮೈಸೂರ್‌ನಲ್ಲಿ ನಡೆದ ರಾಷ್ಟ್ರೀಯ ಸಮ್ಮೇಳನದಲ್ಲಿ ''ಪರಿಶಿಷ್ಟ ಪಂಗಡಗಳ ಸಾಕ್ಷರತ: ಕರ್ನಾಟಕದಲ್ಲಿ ನಾಯಕ ಸಮುದಾಯದ ನೋಟ'' ಎಂಬ ವಿಷಯದ ಬಗ್ಗೆ ಪ್ರಬಂಧವನ್ನು ಮಂಡಿಸಿರುತ್ತಾರೆ.

ಕೇಂದ್ರದ ಪೋಸ್ಟ್ ಡಾಕ್ಟರಲ್ ಪೆಲೋ ರಾದ ಡಾ. ಶೀಕ್ರಾಂತ ನಾಯಕ ಜಿ. ದಿನಾಂಕ 6 ಮತ್ತು 7 ಡಿಸೆಂಬರ್ 2016 ರಂದು ಡಾ.ಬಿ.ಆರ್. ಅಂಬೇಡ್ಕರ್ ಕೇಂದ್ರದಲ್ಲಿ ನಡೆದ ರಾಷ್ಟ್ರೀಯ ಸಮ್ಮೇಳನದಲ್ಲಿ ''ಕರ್ನಾಟಕದ ಮಡಿಕೇರಿ ಜಿಲ್ಲೆಯಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಯಲ್ಲಿ ದಲಿತರ ಭಾಗವಹಿಸುವಿಕೆ'' ಎಂಬ ವಿಷಯದ ಬಗ್ಗೆ ಪ್ರಬಂಧವನ್ನು ಜಂಟಿಯಾಗಿ ಮಂಡಿಸಿರುತ್ತಾರೆ.

ಕೇಂದ್ರದ ಪೋಸ್ಟ್ ಡಾಕ್ಟರಲ್ ಪೆಲೋ ರಾದ ಡಾ. ಶೀಕ್ರಾಂತ ನಾಯಕ ಜಿ. ದಿನಾಂಕ 21 ರಿಂದ 22 ಡಿಸೆಂಬರ್ 2016 ರಂದು ಸೆಂಟರ್ ಫಾರ್ ಹ್ಯುಮನ್ ರಿಕೋರ್ಸ್ ಡೆವಲಪ್‌ಮೆಂಟ್, ನ್ಯಾಷನಲ್ ಇನ್‌ಸ್ಟೂಟ್ ಆಫ್ ರೂರಲ್ ಡೆವಲಪ್‌ಮೆಂಟ್ ಹೈದರ್‌ಬಾದ್, ಆಂದ್ರ ಪ್ರದೇಶ ದಲ್ಲಿ ನಡೆದ ರಾಷ್ಟ್ರೀಯ ಸಮ್ಮೇಳನದಲ್ಲಿ ''ಕರ್ನಾಟಕದಲ್ಲಿ ಅರಣ್ಯ ಬುಡಕಟ್ಟು ಮಕ್ಕಳಿಗೋಸ್ಕರ ವಿಶೇಷ ಶಾಲೆಗಳ ಸ್ಥಾಪನೆ: ಶಾಲಾ ಶಿಕ್ಷಣದಲ್ಲಿ ಕೇಂದ್ರೀಕೃತ ಮಕ್ಕಳ ಒಳಗೊಳ್ಳುವಿಕೆಗೆ ಕಾರ್ಯತಂತ್ರ'' ಎಂಬ ವಿಷಯದ ಬಗ್ಗೆ ಪ್ರಬಂಧವನ್ನು ಜಂಟಿಯಾಗಿ ಮಂಡಿಸಿರುತ್ತಾರೆ.

ಕೇಂದ್ರದ ಪೋಸ್ಟ್ ಡಾಕ್ಟರಲ್ ಪೆಲೋ ರಾದ ಡಾ. ಶೀಕ್ರಾಂತ ನಾಯಕ ಜಿ. ದಿನಾಂಕ 16 ಮತ್ತು 17 ಫೆಬ್ರವರಿ 2017 ರಂದು ಸ್ಕೂಲ್ ಆಫ್ ಬಿಸೆನೆಸ್ ಎಂಡ್ ಡಿಪಾರ್ಟ್‌ಮೆಂಟ್ ಆಫ್ ಇಕಾನೋಮಿಕ್ಸ್, ರಾಣಿ ಚೆನ್ನಮ್ಮ ಯುನಿವರ್ಸಿಟಿ, ಬೆಳಗಾಂ ನಲ್ಲಿ ನಡೆದ ರಾಷ್ಟ್ರೀಯ ಸಮ್ಮೇಳನದಲ್ಲಿ ''ಭಾರತದಲ್ಲಿ ಕೃಷಿವಲಯಕ್ಕೆ ಸಾಲ ಹರಿಯುವಿಕೆ: ಸ್ಥಿತಿ ಮತ್ತು ಸಾಧನೆ, ಭಾರತದಲ್ಲಿ ಕೃಷಿ ಒಳಗೊಂಡ ಬೆಳವಣಿಗೆ: ಸಮಸ್ಯೆಗಳು ಮತ್ತು ಸವಾಲುಗಳು'' ಎಂಬ ವಿಷಯದ ಬಗ್ಗೆ ಪ್ರಬಂಧವನ್ನು ಮಂಡಿಸಿರುತ್ತಾರೆ.

ಕೇಂದ್ರದ ಪೋಸ್ಟ್ ಡಾಕ್ಟರಲ್ ಪೆಲೋ ರಾದ ಡಾ. ಶೀಕ್ರಾಂತ ನಾಯಕ ಜಿ.ದಿನಾಂಕ 3 ಮತ್ತು 4 ಮಾರ್ಚ್, 2017 ರಂದು ನಡೆದ ಸಿ.ಎಸ್.ಇ.ಐ.ಪಿ.,, ಶ್ರೀ ಕೃಷ್ಣದೇವರಾಯ ಯುನಿವರ್ಸಿಟಿ, ಅನಂತಪುರ, ಆಂದ್ರ ಪ್ರದೇಶ ರಲ್ಲಿ ನಡೆದ ರಾಷ್ಟ್ರೀಯ ಸಮ್ಮೇಳನದಲ್ಲಿ ''ಸರ್ಕಾರೇತರ ಸಂಸ್ಥೆಗಳು ಮತ್ತು ಬುಡಕಟ್ಟು ಜನರ ಸಂರಕ್ಷಣೆ: ಕರ್ನಾಟಕದ ಮೈಸೂರ ಜಿಲ್ಲೆಯಲ್ಲಿ'' ಎಂಬ ವಿಷಯದ ಬಗ್ಗೆ ಪ್ರಬಂಧವನ್ನು ಮಂಡಿಸಿರುತ್ತಾರೆ.

ಕೇಂದ್ರದ ಪೋಸ್ಟ್ ಡಾಕ್ಟರಲ್ ಪೆಲೋ ರಾದ ಡಾ. ಶೀಕ್ರಾಂತ ನಾಯಕ ಜಿ. ದಿನಾಂಕ 8 ಮತ್ತು 9 ಮಾರ್ಚ್ 2017 ರಂದು ನ್ಯಾಷನಲ್ ಇನ್‌ಸ್ಟೂಟ್ ರೂರಲ್ ಡೆವಲಪ್‌ಮೆಂಟ್ ಆಂಡ್ ಪಂಚಾಯತ್‌ರಾಜ್–ನೊರ್ತ್–ಈಸ್ಟ್ ರಿಜಿನಲ್ ಸೆಂಟರ್ ಗುವಟಿ, ಅಸ್ಸಂ ರಲ್ಲಿ ನಡೆದ ರಾಷ್ಟ್ರೀಯ ಸಮ್ಮೇಳನದಲ್ಲಿ ''ಶಿಕ್ಷಣ ಮತ್ತು ಪ್ರೋತ್ಸಾಹದಾಯಕ ಕಾರ್ಯಕ್ರಮಗಳು: ಭಾರತದಲ್ಲಿ ಮೂಲನಿವಾಸಿ ಜನರ ಅಭಿವೃದ್ಧಿ: ಈಶಾನ್ಯ ವಲಯ'' ಎಂಬ ವಿಷಯದ ಬಗ್ಗೆ ಪ್ರಬಂಧವನ್ನು ಮಂಡಿಸಿರುತ್ತಾರೆ.

ಕೇಂದ್ರದ ಪೋಸ್ಟ್ ಡಾಕ್ಟರಲ್ ಪೆಲೋ ರಾದ ಡಾ. ಶೀಕ್ರಾಂತ ನಾಯಕ ಜಿ. ದಿನಾಂಕ 20ಮತ್ತು 21 ಮಾರ್ಚ್ 2016 ರಂದು ನಡೆದ ಸಿ.ಎಸ್.ಇ.ಐ.ಪಿ.,, ಶ್ರೀ ಕೃಷ್ಣದೇವರಾಯ ಯುನಿವರ್ಸಿಟಿ, ಅನಂತಪುರ, ಆಂದ್ರ ಪ್ರದೇಶ ರಲ್ಲಿ ನಡೆದ ರಾಷ್ಟ್ರೀಯ ಸಮ್ಮೇಳನದಲ್ಲಿ ''ಬುಡಕಟ್ಟು ಉಪಯೋಜನೆ ಕರ್ನಾಟಕದ ಮುಂಗಡಪತ್ರದಲ್ಲಿ ಅನುದಾನದ ಹಂಚಿಕೆ: ಪರಿಶಿಷ್ಟ ಪಂಗಡದ ಕಲ್ಯಾಣ ಯೋಜನೆಗಳು'' ಎಂಬ ವಿಷಯದ ಬಗ್ಗೆ ಪ್ರಬಂಧವನ್ನು ಮಂಡಿಸಿರುತ್ತಾರೆ.

ಶ್ರೀಮತಿ. ಮಂಜುಳ ಬಿ. ರಿಸರ್ಚ್ ಅಸಿಸ್ಟಂಟ್‌ರವರು ದಿನಾಂಕ 6 ಮತ್ತು 7 ,ಡಿಸೆಂಬರ್ 2016 ರಂದು ಡಾ.ಬಿ.ಆರ್. ಅಂಬೇಡ್ಕರ್ ಕೇಂದ್ರ ನಡೆಸಿದ ರಾಷ್ಟ್ರೀಯ ಸಮ್ಮೇಳನದಲ್ಲಿ ''ಕರ್ನಾಟಕದ ಮಡಿಕೇರಿ ಜಿಲ್ಲೆಯಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಯಲ್ಲಿ ದಲಿತರ ಭಾಗವಹಿಸುವಿಕೆ'' ಎಂಬ ಪ್ರಬಂಧವನ್ನು ಜಂಟಿಯಾಗಿ ಮಂಡಿಸಿರುತ್ತಾರೆ.

5. ಸಮ್ಮೇಳನದ ನಡವಳಿಗಳಲ್ಲಿ ಪ್ರಕಟಿಸಿದ ಪತ್ರಿಕೆಗಳು:

ಡಾ. ಶೀಕ್ರಾಂತ ನಾಯಕ ಜಿ , ಡಾ. ರಾಮಕೃಷ್ಣಪ್ಪ . ವಿ. ಮತ್ತು ಪ್ರೋ. ವಿಶ್ವನಾಥ : ''ಕಲೆಕ್ಷನ್ ಮತ್ತು ಮಾರ್ಕೆಟಿಂಗ್ ಆಫ್ ಮೈನರ್ ಪೋರೆಸ್ಟ್ ಪ್ರೋಡ್ಯುಸಸ್ ಇನ್ ಟ್ರೈಬಲ್ ಎರಿಯಸ್: ಯಾನ್ ಅನಾಲಿಸಿಸ್ ಆಫ್ ಸ್ಕಿಲ್ ಡೆವಲಪ್‌ಮೆಂಟ್ ಪ್ರೋಗ್ರಾಂಸ್ ಫಾರ್ ಹ್ಯುಮನ್'' ಇನ್ ಅನ್ ಎಡಿಟೆಡ್ ಬುಕ್ ''ಸ್ಕಿಲ್ ಇಂಡಿಯಾ ಆಂಡ್ ಡೆವಲಪ್‌ಮೆಂಟ್: ಎರ್ಮಜಿಂಗ್ ಡಿಬೆಟ್ಸ್(ಎಡಿಟ್: ಡಾ. ದಿನೇಶ್ , ಪಿಟಿ), ಜುಲೈ 2016, ಮೈಸೂರು : ನ್ಯಾಷನಲ್ ಸೆಂಟರ್ ಫಾರ್ ಇನ್‌ಕ್ಲೂಷಿವ್ ಗ್ರೋತ್ ಆಂಡ್ ಡೆವಲಪ್‌ಮೆಂಟ್ ರಿಸರ್ಚ್.ಪಿ.ಪಿ.229–241(ಐ.ಎಸ್.ಬಿ.ಎನ್: 978–81927970–4–5).

ಡಾ. ರಾಮಕೃಷ್ಣಪ್ಪ . ವಿ. : ''ಡೈನಾಮಿಕ್ಸ್ ಆಫ್ ಪಿಮೇಲ್ ಲೇಬರ್ ಪೋರ್ಸ್ ಪರ್ಟಿಸಿಪಷನ್ ಇನ್ ಇಂಡಿಯಾ:ಯಾನ್ ಅನಾಲಿಸಿಸಿ'' ಇನ್ ಯಾನ್ ಎಡಿಟೆಡ್ ಬುಕ್ ''ಸೋಸೆಲ್ ಡೆವಲಪ್‌ಮೆಂಟ್ ಇನ್ ಇಂಡಿಯಾ: ಎಮರ್ಜಿಂಗ್ ಡಿಬೆಟ್ಸ್ (ಎಡಿಟ್ಸ್: ಡಾ. ವಿ.ಜಿ. ಸಿದ್ದರಾಜು), ಮೈಸೂರು: ದೀಕ್ಷಾ ಪಬ್ಲಿಕೇಷನ್ಸ್, ಪಿ.ಪಿ. 55–63(ಐ.ಎಸ್.ಬಿ.ಎನ್: 978–81–931384–7–2).

ಡಾ. ಶೀಕ್ರಾಂತ ನಾಯಕ ಜಿ , ಡಾ. ರಾಮಕೃಷ್ಣಪ್ಪ . ವಿ. ಮತ್ತು ಪ್ರೋ. ವಿಶ್ವನಾಥ :''ಡೆವಲಪ್‌ಮೆಂಟ್ ಆಂಡ್ ಮಾರ್ಜಿನಲೈಸೆಸನ್ ಆಫ್ ಪ್ರೈಮಿಟಿವ್ ಟ್ರೈಬಲ್ ಗ್ರೋಪ್ಸ್ ಇನ್ ಕರ್ನಾಟಕ: ಎ ಸ್ಟಡಿ ಆನ್ ಕೊರಗ ಕಮ್ಯುನಿಟಿ ಆಫ್ ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್''. ಕ್ಯುಸ್ಟ್ ಇಂಟರ್‌ನ್ಯಾಷನಲ್ ಮಲ್ಟಿಡಿಸಿಪ್ಲೇನರಿ ರಿಸರ್ಚ್ ಜರ್ನಲ್ (ಪಿರ್ ರಿವಿವ್ಡ್), ವೊಲ್ಯುಮ್. ಗಿ, ಇಸ್ಯು . VII (ಅಗೋಸ್ಟ್–ಸೆಪ್ಟಂಬರ್ 2016) ಐ.ಎಸ್.ಎಸ್.ಎನ್: 2278–4497,ಪಿ .ಪಿ.15–22.

ಕೇಂದ್ರದ ಸಹಾಯಕ ಪ್ರಾಧ್ಯಾಪಕರಾದ ಡಾ. ನಾಗರಾಜ್ ಮುಗ್ಗೂರ್: ''ದಿ ಲಿಟರಸಿ ಸ್ಟಟಸ್ ಆಫ್ ಟ್ರೈಬಲ್ ಹ್ಯುಮನ್ ಇನ್ ಕರ್ನಾಟಕ'' ಒನ್ ಇಂಟರ್‌ನ್ಯಾಷನಲ್ ಜರ್ನಲ್ ಆಫ್ ಸೈಂಟಿಪಿಕ್ ರಿಸರ್ಚ್ (ಪಿರ್ ರಿವ್ಡ್ ಇಂಟರ್‌ನ್ಯಾಷನಲ್ ಜರ್ನಲ್) ವೊಲ್ಯುಮ್. 5, ಇಸ್ಯು – 4, ಎಪ್ರಿಲ್ 2016. ,ಪಿ .ಪಿ. 35–37, ಐ.ಎಸ್. ಎಸ್.ಎನ್:2277–8179, ಐಎಫ್: 3.508, ಐಸಿ ವ್ಯಾಲ್ಯೆ : 69.48.

ಕೇಂದ್ರದ ಸಹಾಯಕ ಪ್ರಾಧ್ಯಾಪಕರಾದ ಡಾ. ನಾಗರಾಜ್ ಮುಗ್ಗೂರ್: '' ವಯ್‌ಲೆನ್ಸ್ ಎಗೇಂಸ್ಟ್ ಹ್ಯುಮನ್ ಇನ್ ಕರ್ನಾಟಕ, ಇಂಡಿಯಾ ಒನ್ ಪಿಎಆರ್‌ಐಪಿಇಎಕ್ಸ್ ಇಂಡಿಯಾನ್ ಜರ್ನಲ್ ಆಫ್ ರಿಸರ್ಚ್(ಪಿರ್ ರಿವ್ಡ್ ಇಂಟರ್‌ನ್ಯಾಷನಲ್ ಜರ್ನಲ್) ವೊಲ್ಯುಮ್. 5, ಇಸ್ಯು – 7, ಜುಲೈ 2016. , ಐ.ಎಸ್. ಎಸ್.ಎನ್:2250–1991, ಐಎಫ್: 5.215, ಐಸಿ ವ್ಯಾಲ್ಯೆ : 77.65.

ಕೇಂದ್ರದ ಸಹಾಯಕ ಪ್ರಾಧ್ಯಾಪಕರಾದ ಡಾ. ನಾಗರಾಜ್ ಮುಗ್ಗೂರ್: '' ಮೆನಿ ಪೆಸಸ್ ಆಫ್ ಜಂಡರ್ ಇನ್‌ಇಕ್ವಾಲಿಟಿ ಇನ್ ಕರ್ನಾಟಕ, ಇಂಡಿಯಾ ಒನ್ ಪಿಎಆರ್‌ಐಪಿಇಎಕ್ಸ್ ಇಂಡಿಯಾನ್ ಜರ್ನಲ್ ಆಫ್ ರಿಸರ್ಚ್(ಪಿರ್ ರಿವ್ಡ್ ಇಂಟರ್‌ನ್ಯಾಷನಲ್ ಜರ್ನಲ್) ವೊಲ್ಯುಮ್. 5, ಇಸ್ಯು – 7, ಜುಲೈ 2016., ಐ.ಎಸ್. ಎಸ್.ಎನ್:2250–1991, ಐಎಫ್: 5.215, ಐಸಿ ವ್ಯಾಲ್ಯೆ : 77.65.

ಕೇಂದ್ರದ ಸಹಾಯಕ ಪ್ರಾಧ್ಯಾಪಕರಾದ ಡಾ. ನಾಗರಾಜ್ ಮುಗ್ಗೂರ್: ''ಅಗ್ರಿಕಲ್ಚರ್ ಸಿಚುವೇಸನ್ ಇನ್ ಕರ್ನಾಟಕ, ಒನ್ ಒವರ್‌ವಿವ್ ಒನ್ ಪಿಎಆರ್‌ಐಪಿಇಎಕ್ಸ್ ಇಂಡಿಯಾನ್ ಜರ್ನಲ್ ಆಫ್ ರಿಸರ್ಚ್(ಪಿರ್ ರಿವ್ಡ್ ಇಂಟರ್‌ನ್ಯಾಷನಲ್ ಜರ್ನಲ್) ವೊಲ್ಯುಮ್. 5, ಇಸ್ಯು – 8, ಅಗೋಸ್ಟ್ 2016. , ಐ.ಎಸ್. ಎಸ್.ಎನ್:2250–1991, ಐಎಫ್: 5.215, ಐಸಿ ವ್ಯಾಲ್ಯೆ : 77.65.

ಕೇಂದ್ರದ ಸಹಾಯಕ ಪ್ರಾಧ್ಯಾಪಕರಾದ ಡಾ. ನಾಗರಾಜ್ ಮುಗ್ಗೂರ್: ''ನೀಡ್ ಫಾರ್ ಯನ್ ಇಪೆಕ್ಟೀವ್ ಇನ್‌ಕ್ಲೂಸಿವ್ ಪಾಲಿಸಿ ಫಾರ್ ಹ್ಯುಮನ್ ಎಂಪವರ್‌ಮೆಂಟ್'' ಇನ್ ಎಡಿಟೆಡ್ ಬುಕ್ ಆಫ್ ''ರೆಡಿಸಿಕವರಿ ಆಫ್ ಇನ್‌ಕ್ಲೂಷಿವ್ ಗ್ರೋತ್''(ಎಡಿಟೆಡ್ ಬೈ: ರಾಮಚಂದ್ರ ಮೂರ್ತಿ & ದಿನೇಶ ಪಿ.ಟಿ), ಡಿಸೆಂಬರ್ 2016, ರೋಡ್ ಟ್ರಸ್ಟ ಪಬ್ಲಿಕೇಷನ್ , ಮೈಸೂರು, ಪಿ.ಪಿ. 189–205 (ಐಎಸ್‌ಬಿಎನ್:978–81–910230–6–0).

ಕೇಂದ್ರದ ಸಹಾಯಕ ಪ್ರಾಧ್ಯಾಪಕರಾದ ಡಾ. ನಾಗರಾಜ್ ಮುಗ್ಗೂರ್: ''ಪಾರ್ಮರ್ ಸುಸೈಡ್ ಕೇಸಸ್ ಇನ್ ಕರ್ನಾಟಕ: ಯಾನ್ ಒವರ್‌ವಿವ್'' ಓನ್ ಪಿಎಆರ್‌ಐಪಿಇಎಕ್ಸ್ ಇಂಡಿಯಾನ್ ಜರ್ನಲ್ ಆಫ್ ರಿಸರ್ಚ್(ಪಿರ್ ರಿವ್ಡ್ ಇಂಟರ್‌ನ್ಯಾಷನಲ್ ಜರ್ನಲ್) ವೊಲ್ಯುಮ್. 6, ಇಸ್ಯು – 1, ಜನವರಿ 2017. , ಐ.ಎಸ್. ಎಸ್.ಎನ್:2250–1991, ಐಎಫ್: 5.215, ಐಸಿ ವ್ಯಾಲ್ಯೆ : 77.65.

ಕೇಂದ್ರದ ಸಹಾಯಕ ಪ್ರಾಧ್ಯಾಪಕರಾದ ಡಾ. ನಾಗರಾಜ್ ಮುಗ್ಗೂರ್: ''ಮೈಗ್ರೇಶನ್ ಆಂಡ್ ಗ್ರೋತ್ ಆಫ್ ಅರ್ಬನ್ ಪಾಪ್ಯುಲೇಷನ್ ಇನ್ ಕರ್ನಾಟಕ'' ಇನ್ ಎಡಿಟೆಡ್ ಬುಕ್ ಆಫ್ ''ಅರ್ಬನ್ ಪರ್ವಟಿ ಆಂಡ್ ಸೊಸಿಯಲ್ ಎಕ್ಲೂಸನ್ '' (ಎಡಿಟೆಡ್ ಬೈ–ದಿನೇಶ ಪಿ.ಟಿ), ಜನವರಿ 2017, ಸ್ರಿಂಗ್ ಲೀಫ್ ಪಬ್ಲಿಕೇಷನ್, ಮೈಸೂರು, ಪಿ.ಪಿ. 90–99 (ಐ.ಎಸ್.ಬಿ.ಎನ್.978–81–923619–1–8).

ಕೇಂದ್ರದ ಸಹಾಯಕ ಪ್ರಾಧ್ಯಾಪಕರಾದ ಡಾ. ನಾಗರಾಜ್ ಮುಗ್ಗೂರ್: ''ಟ್ರೈಬಲ್ ಆಂಡ್ ಹ್ಯುಮನ್ ರೈಟ್ಸ್ ಇನ್ ಇಂಡಿಯಾ'' ಇನ್ ಎಡಿಟೆಡ್ ಬುಕ್ ಆಫ್ ಕಾನ್‌ಪರೆನ್ಸ್ ಪ್ರೋಸಿಡಿಂಗ್ಸ್'' ಹ್ಯುಮನ್ ರೈಟ್ಸ್ (ಎಡಿಟೆಡ್ ಬೈ –ಡಾ. ಎ.ಎಮ್ . ಮಂಜುನಾಥ

ಆಂಡ್ ಅದರ್ಸ್), ಜನವರಿ 2017, ಓಂಕಾರ್ ಪ್ರಿಂಟರ್ಸ್, ತುಮಕೂರು, ಪಿ.ಪಿ. 58–62 (ಐ.ಎಸ್.ಬಿ.ಎನ್ :978–93–82694–32–8).

ಕೇಂದ್ರದ ಪೋಸ್ಟ್ ಡಾಕ್ಟರಲ್ ಪೆಲೋ ರಾದ ಡಾ. ಶೀಕ್ರಾಂತ ನಾಯಕ ಜಿ: ''ಕಲೆಕ್ಷನ್ ಆಂಡ್ ಮಾರ್ಕೆಟಿಂಗ್ ಆಫ್ ಮೈನರ್ ಫೋರೆಸ್ಟ್ ಪ್ರೋಡ್ಯುಸಸ್ ಇನ್ ಟ್ರೈಬಲ್ ಎರಿಯಸ್: ಯಾನ್ ಅನಾಲಿಸಿಸ್ ಆಫ್ ಸ್ಕಿಲ್ ಡೆವಲಪ್‌ಮೆಂಟ್ ಪ್ರೋಗ್ರಾಂಸ್ ಪಾರ್ ಹ್ಯುಮನ್ : ಸ್ಕಿಲ್ ಇಂಡಿಯಾ ಆಂಡ್ ಡೆವಲಪ್‌ಮೆಂಟ್: ಎಮರ್ಜಿಂಗ್ ಡಿಬೆಟ್ಸ್ ಬುಕ್ ಎಡಿಟ್ಸ್, ಜುಲೈ 2016 . ಪೇಜಸ್ 229–241,ನ್ಯಾಷನಲ್ ಸೆಂಟರ್ ಫಾರ್ ಇನ್‌ಕ್ಲೂಸಿವ್ ಗ್ರೋತ್ ಆಂಡ್ ಡೆವಲಪ್‌ಮೆಂಟ್ ರಿಸರ್ಚ್, ಮೈಸೂರು (ಐಎಸ್‌ಬಿಎನ್: 978–81927970–4–5).

ಕೇಂದ್ರದ ಪೋಸ್ಟ್ ಡಾಕ್ಟರಲ್ ಪೆಲೋ ರಾದ ಡಾ. ಶೀಕ್ರಾಂತ ನಾಯಕ ಜಿ: ''ಡೆವಲಪ್‌ಮೆಂಟ್ ಆಂಡ್ ಮಾರ್ಜಿನಲೈಸೇಷನ್ ಆಫ್ ಪ್ರೈಮಿಟಿವ್ ಟ್ರೈಬಲ್ ಗ್ರೋಫ್ಸ್ ಇನ್ ಕರ್ನಾಟಕ: ಎ ಸ್ಟಡಿ ಓನ್ ಕೂರಗ ಕಮ್ಯುನಿಟಿ ಆಫ್ ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್, ಕ್ಯುಸ್ಟ್ ಇಂಟರ್‌ನ್ಯಾಷನಲ್ ಮಲ್ಟಿಡಿಸಿಪ್ಲಿನರಿ ರಿಸರ್ಚ್ ಜರ್ನಲ್ ವೊಲ್ಯುಮ್ –5, ಇಸ್ಯು – 7, ಅಗೋಸ್ಟ್ – ಸೆಪ್ಟಂಬರ್ 2016, ಪೇಜಸ್: 15–20 , ಪಬ್ಲಿಸ್ ವರ್ಲ್ಡ್ ಆನಂದ್ , ಗುಜರಾತ್ (ಐ.ಎಸ್. ಎಸ್.ಎನ್:2278–4497).

ಕೇಂದ್ರದ ಪೋಸ್ಟ್ ಡಾಕ್ಟರಲ್ ಪೆಲೋ ರಾದ ಡಾ. ಶೀಕ್ರಾಂತ ನಾಯಕ ಜಿ: ರೈತರ ಉಪ ಆದಾಯಕ್ಕೆ ''ಕೃಷಿ ಪ್ರವಾಸೋದ್ಯಮ'' ಸಹಕಾರ ಕನ್ನಡ , ಫೆಬ್ರವರಿ 2017,ಪೇಜಸ್ 28–31, ಇಸ್ಯು – 31, ವೊಲ್ಯುಮ್– 48, ಕರ್ನಾಟಕ ಸ್ಟೇಟ್ ಕೋ–ಒಪರೇಟಿವ್ ಪೆಡರೇಶನ್, ಬೆಂಗಳೂರು.

ಶ್ರೀಮತಿ. ಮಂಜುಳ ಬಿ. ರಿಸರ್ಚ್ ಅಸಿಸ್ಟಂಟ್ ಮತ್ತು ಪ್ರೋ. ವಿಶ್ವನಾಥ . ''ಪರಿಶಿಷ್ಟ ಜಾತಿ ಕುಟುಂಬಗಳ ಉದ್ಯೋಗಿಗಳಲ್ಲಿನ ಭಾಗವಹಿಸುವಿಕೆ ಮತ್ತು ಜೀವನೋಪಾಯ: ಕೇರಳದ ಕಾಸರಗೋಡು ಜಿಲ್ಲೆಯ ಒಂದು ಅಧ್ಯಯನ''. ಇಂಡಿಯಾನ್ ಸ್ಟ್ರೀಮ್ಸ್ ರಿಸರ್ಚ್ ಜರ್ನಲ್, ವೊಲ್ಯುಮ್– 6, ಇಸ್ಯು – 11, (ಡಿಸೆಂಬರ್ –2016), ಐಎಸ್‌ಎಸ್‌ಎನ್: 2230–7850.

6. ಪುಸ್ತಕ ಪ್ರಕಟನೆ:

ಕೇಂದ್ರದ ಸಹಾಯಕ ಪ್ರಾಧ್ಯಾಪಕರಾದ ಡಾ.ಕುಮಾರ ಬಿ.ಎಂ.: ಪುಸ್ತಕ ದ ಹೆಸರು ''ಕೊಳಚೆ ನಿವಾಶಿಗಳಲ್ಲಿನ ವಸತಿ ಸಮಸ್ಯೆಗಳು: ಮಂಗಳೂರು ನಗರದ ಒಂದು ಅಧ್ಯಯನ'' ಪಬ್ಲಿಸ್‌ಡ್ ಬೈ ಲುಲು ಪಬ್ಲಿಕೇಷನ್, ರಲೈಗ್, ಎನ್‌ಸಿ 27607, ಯುನೈಟೆಡ್ ಸ್ಟೇಟ್ಸ್, ಐಎಸ್‌ಬಿಎನ್ :978–1–365–56315–7.

ಕೇಂದ್ರದ ಸಹಾಯಕ ಪ್ರಾಧ್ಯಾಪಕರಾದ ಡಾ.ಕುಮಾರ ಬಿ.ಎಂ.: ಪುಸ್ತಕದ ಹೆಸರು ''ಕರ್ನಾಟಕದಲ್ಲಿ ತರಕಾರಿ ಬೆಳೆಗಳ ಉತ್ಪಾದನೆ, ಮಾರುಕಟ್ಟೆ ಮತ್ತು ಬೆಲೆಯ ಸಂಚಲನೆ: ಮೈಸೂರು ಜಿಲ್ಲೆಯ ಒಂದು ಅಧ್ಯಯನ'' ಪಬ್ಲಿಸ್‌ಡ್ ಬೈ ಸ್ಕೋಲರ್ಸ್ ಪ್ರೆಸ್, ಜರ್ಮನಿ, ಐಎಸ್‌ಬಿಎನ್: 978–3–659–84569–7.

7. **ರಿಸರ್ಚ್ ಪೇಪರ್ ಪ್ರಕಟನೆ:**

ಕೇಂದ್ರದ ಸಹಾಯಕ ಪ್ರಾಧ್ಯಾಪಕರಾದ ಡಾ.ಕುಮಾರ ಬಿ.ಎಂ.: ಪೇಪರಿನ ಹೆಸರು ''ಕರ್ನಾಟಕದಲ್ಲಿನ ಗ್ರಾಮೀಣ ಕೃಷಿ ಮಾರುಕಟ್ಟೆಯಲ್ಲಿನ ಸಮಸ್ಯೆಗಳು ಮತ್ತು ವಸ್ತುಸ್ಥಿತಿ'', ಎಡಿಟ್. ಬುಕ್ ಒನ್ ಬಿಸಿನೆಸ್ ಎಜ್ಯುಕೇಷನ್ ಆಂಡ್ ಎಂಪ್ಲೋಯಬಿಲಿಟಿ: ಚಾಲೆಂಜಸ್ ಆಂಡ್ ನ್ಯೂ ಡೈರೆಕ್ಸ್‌ನ್, ಎಡಿಟ್ ಬೈ: ಪಿ.ಎಸ್. ಯಡಪಡಿತ್ತಾಯ. ಎಫ್ರಿಲ್. ಐ ಎಸ್ ಬಿ ಎನ್: 978–93–84262–24–2, ಪಿ.ಪಿ–391–4.

ಕೇಂದ್ರದ ಸಹಾಯಕ ಪ್ರಾಧ್ಯಾಪಕರಾದ ಡಾ.ಕುಮಾರ ಬಿ.ಎಂ.:ಪೇಪರಿನ ಹೆಸರು '' ಭೂ ರಹಿತ ಪರಿಶಿಷ್ಟ ಜಾತಿ ಜನಾಂಗದಲ್ಲಿ ವೇತನ ಸಂಪಾದನೆ ಕಸಬು ರಚನೆ: ಮೈಸೂರು ಜಿಲ್ಲೆಯಲ್ಲಿನ ಒಂದು ಸಂಶೋದನೆ'': ಇಂಡಿಯಾನ್ ಸ್ಟ್ರೀಮ್ ರಿಸರ್ಚ್ ಜರ್ನಲ್, (ಇಂಟರ್‌ನ್ಯಾಷನಲ್ ಮಲ್ಟಿಡಿಸಿಪ್ಲಿನರಿ ರಿಸರ್ಚ್ ಜರ್ನಲ್), 6(4), ಐಎಸ್‌ಎಸ್‌ಎನ್: 2230–7850, ಮೇ, ಇಂಪ್ಯಾಕ್ಟ್ ಇಪ್ಯಾಕ್ಟ್ ಫ್ಯಾಕ್ಟರ್ : 4.1625(ಯು.ಐ.ಎಫ್), ಪಿ.ಪಿ.–1–9.

ಕೇಂದ್ರದ ಸಹಾಯಕ ಪ್ರಾಧ್ಯಾಪಕರಾದ ಡಾ.ಕುಮಾರ ಬಿ.ಎಂ.: ಪೇಪರಿನ ಹೆಸರು ''ದಕ್ಷಿಣ ಕರ್ನಾಟಕದಲ್ಲಿ ಸಾಕು ಪ್ರಾಣಿಗಳ ಬದಲಾವಣೆಯ ರಚನೆ'' ಗೋಲ್ಡನ್ ರಿಸರ್ಚ್ ತ್ವಾಟ್ಸ್, (ಇಂಟರ್‌ನ್ಯಾಷನಲ್ ರೆಕೋಗ್ನೈಸನ್ ಮಲ್ಟಿಡಿಸಿಪ್ಲೀನರಿ ರಿಸರ್ಚ್ ಜರ್ನಲ್), 5(12), ಜೂನ್, ಐಎಸ್‌ಎಸ್‌ಎನ್: 2231–5063,ಇಂಪ್ಯಾಕ್ಟ್ ಫ್ಯಾಕ್ಟರ್: 3.4052((ಯುಐಎಫ್), ಪಿ.ಪಿ.: 1–7.

ಕೇಂದ್ರದ ಸಹಾಯಕ ಪ್ರಾಧ್ಯಾಪಕರಾದ ಡಾ.ಕುಮಾರ ಬಿ.ಎಂ.: ಪೇಪರಿನ ಹೆಸರು ''ದಕ್ಷಿಣ ಭಾರತದಲ್ಲಿನ ವಿಕಲಚೇತನ ವಸ್ತುಸ್ಥಿತಿ: ಕರ್ನಾಟಕದಲ್ಲಿ ಒಂದು ಅಧ್ಯಯನ'' ಇಂಟರ್‌ನ್ಯಾಷನಲ್ ಜರ್ನಲ್ ಆಫ್ ಅಕಾಡೆಮಿಕ್ ರಿಸರ್ಚ್, 3–6(1), ಜೂನ್, ಐಎಸ್‌ಎಸ್‌ಎನ್: 2348–7666, ಇಂಪ್ಯಾಕ್ಟ್ ಫ್ಯಾಕ್ಟರ್ : 3.656, ಪಿ.ಪಿ.: 91–8.

ಕೇಂದ್ರದ ಸಹಾಯಕ ಪ್ರಾಧ್ಯಾಪಕರಾದ ಡಾ.ಕುಮಾರ ಬಿ.ಎಂ.: ಪೇಪರಿನ ಹೆಸರು ''ಭಾರತದಲ್ಲಿ ಕಪ್ಪು ಹಣದ ಪಾತ್ರ: ಆರ್ಥಿಕ ಬೆಳವಣಿಗೆಯಲ್ಲಿ ಇದರ ಪರಿಣಾಮ'' ಪಬ್ಲಿಸ್‌ಡ್ ಇನ್ ಎಡಿಟೆಡ್ ಬುಕ್ ಒನ್ ಅಡ್ವಾನ್ಸ್‌ಸ್ ಇನ್ ಕೊಲಬರೇಟಿವ್ ರಿಸರ್ಚ್ ಬೈ ಪುತ್ತೂರಾಜು ಕೆ. ಐಎಸ್‌ಬಿಎನ್: 978–1535287715, ಜೂನ್, ಪಬ್ಲಿಷರ್: ಕ್ರಿಯೆಟ್ ಸ್ಪೇಸ್ : ಯಾನ್ ಅಮೆರಿಫೋನ್ ಕಂಪೆನಿ, ನೋರ್ತ್ ಚಾರ್ಲೆಸ್ಟನ್, ಎಸ್‌ಸಿ 29406, ಯುಎಸ್‌ಎ, ಪಿ.ಪಿ.149–53.

ಕೇಂದ್ರದ ಸಹಾಯಕ ಪ್ರಾಧ್ಯಾಪಕರಾದ ಡಾ.ಕುಮಾರ ಬಿ.ಎಂ.: ಪೇಪರಿನ ಹೆಸರು ''ಕರ್ನಾಟಕದಲ್ಲಿ ನೈಪುಣ್ಯತೆಯ ಅಭಿವೃದ್ಧಿಯ ಮೂಲಕ ಮಹಿಳಾ ಸಬಲೀಕರಣಕ್ಕೆ ಸರ್ಕಾರದ ಕ್ರಮಗಳು'' ಪಬ್ಲಿಸ್‌ಡ್ ಇನ್ ಎಡಿಟೆಡ್ ಬುಕ್ ಒನ್ ಸ್ಕಿಲ್ ಇಂಡಿಯಾ ಆಂಡ್ ಡೆವಲಪ್‌ಮೆಂಟ್: ಎಮರ್ಜಿಂಗ್ ಡಿಬೆಟ್ಸ್, ಎಡಿಟ್. ಬೈ ದಿನೇಶ್ ಪಿ.ಟಿ. ಜುಲೈ, ಐಎಸ್‌ಬಿಎನ್: 978–81927970–4–5, ಪಬ್ಲಿಷರ್: ನ್ಯಾಷನಲ್ ಸೆಂಟರ್ ಫಾರ್ ಇನ್‌ಕ್ಲೂಸಿವ್ ಗ್ರೋತ್ ಆಂಡ್ ಡೆವಲಪ್‌ಮೆಂಟ್ ರಿಸರ್ಚ್ , ಮೈಸೂರು.

ಕೇಂದ್ರದ ಸಹಾಯಕ ಪ್ರಾಧ್ಯಾಪಕರಾದ ಡಾ.ಕುಮಾರ ಬಿ.ಎಂ.: ಪೇಪರಿನ ಹೆಸರು ''ತೆರಿಗೆ ಪದ್ಧತಿಯಲ್ಲಿ ಸರಕು ಮತ್ತು ಸೇವಾತೆರಿಗೆಯ ಪ್ರಾಮುಖ್ಯತೆ: ಭಾರತದ ಬೆಳವಣಿಗೆಯಲ್ಲಿ ಇದರ ಪ್ರಭಾವ'' . ಇಂಟರ್‌ನ್ಯಾಷನಲ್ ಜರ್ನಲ್ ಆಫ್ ರಿಸರ್ಚ್ ಇನ್ ಕಾರ್ಮಸ್ , ಎಕಾನೋಮಿಕ್ಸ್ ಮತ್ತು ಮೆನಾಜ್‌ಮೆಂಟ್ , 6(8), ಅಗೋಸ್ಟ್, ಐಎಸ್‌ಎಸ್ ಎನ್: 2231–4245, ಪಿ.ಪಿ–40–2.

ಕೇಂದ್ರದ ಸಹಾಯಕ ಪ್ರಾಧ್ಯಾಪಕರಾದ ಡಾ.ಕುಮಾರ ಬಿ.ಎಂ.: ಪೇಪರಿನ ಹೆಸರು ''ಕರ್ನಾಟಕದಲ್ಲಿ ಬುಡಕಟ್ಟು ಜನಾಂಗವನ್ನು ಸಬಲೀಕರಣಕ್ಕೆ ಇರುವ ಸರ್ಕಾರದ ಕಾರ್ಯಕ್ರಮಗಳು'' ಇಂಟರ್‌ನ್ಯಾಷನಲ್ ಜರ್ನಲ್ ಆಫ್ ಸೈಂಟಿಫಿಕ್ ರಿಸರ್ಚ್ 5(9), ಸೆಪ್ಟಂಬರ್, ಐಎಸ್‌ಎಸ್ ಎನ್: 2277–8179, ಇಂಪ್ಯಾಕ್ಟ್ ಫ್ಯಾಕ್ಟರ್ 3.508 ,ಪಿ.ಪಿ–46–7.

ಕೇಂದ್ರದ ಸಹಾಯಕ ಪ್ರಾಧ್ಯಾಪಕರಾದ ಡಾ.ಕುಮಾರ ಬಿ.ಎಂ. ಮತ್ತು ಎಸ್. ರಾಜೇಂದ್ರನ್ : ಪೇಪರಿನ ಹೆಸರು ''ಕರ್ನಾಟಕದಲ್ಲಿ ಏಕಧಳ ಧಾನ್ಯಗಳ ಆರ್ಥಿಕ ವಿಶ್ಲೇಷಣೆ: ಒಂದು ಅಧ್ಯಯನ'' ಇಂಟರ್‌ನ್ಯಾಷನಲ್ ಜರ್ನಲ್ ಆಫ್ ಅಕಾಮಿಕ್ ರಿಸರ್ಚ್, 3(11–1), ನವೆಂಬರ್, ಐಎಸ್‌ಎಸ್ ಎನ್: 2348–7666, ಇಂಪ್ಯಾಕ್ಟ್ ಫ್ಯಾಕ್ಟರ್ 4.535 ,ಪಿ.ಪಿ–11–21.

ಕೇಂದ್ರದ ಸಹಾಯಕ ಪ್ರಾಧ್ಯಾಪಕರಾದ ಡಾ.ಕುಮಾರ ಬಿ.ಎಂ : ಪೇಪರಿನ ಹೆಸರು '' ಸ್ಥಳೀಯ ಆಡಳಿತದಲ್ಲಿ ದಲಿತರ ಒಳಗೊಳ್ಳುವಿಕೆ: ಕರ್ನಾಟದ ಗ್ರಾಮ ಪಂಜಾಯ್ತಿ ದಲಿತ ಅಧ್ಯಯನ'' ಯಾನ್ ಇಂಟರ್‌ನ್ಯಾಷನಲ್ ಜರ್ನಲ್: ಪಿಇಆರ್‌ಐಪಿಇಯರ್ಸ್: ಇಂಡಿಯಾನ್ ಜರ್ನಲ್ ಆಫ್ ರಿಸರ್ಚ್, 5(12) ಡಿಸೆಂಬರ್, ಐಎಸ್‌ಎಸ್‌ಎನ್: 2250–1991 , ಇಂಪ್ಯಾಕ್ಟ್ ಫ್ಯಾಕ್ಟರ್ 5.215 ,ಪಿ.ಪಿ–6–7.

ಕೇಂದ್ರದ ಸಹಾಯಕ ಪ್ರಾಧ್ಯಾಪಕರಾದ ಡಾ.ಕುಮಾರ ಬಿ.ಎಂ : ಪೇಪರಿನ ಹೆಸರು '' ಕರ್ನಾಟಕದಲ್ಲಿ ಕೊಳಚೆ ಪ್ರದೇಶ ಅಭಿವೃದ್ಧಿಗೆ ಸ್ಥಳೀಯ ಆಡಳಿತದ ಪಾತ್ರ'' ಕ್ವೀಸ್ಟ್ ಇಂಟರ್‌ನ್ಯಾಷನಲ್ ಮಲ್ಟಿಡಿಸಿಪ್ಲಿನರಿ ರಿಸರ್ಚ್ ಜರ್ನಲ್, 5(8), ಡಿಸೆಂಬರ್, ಐಎಸ್‌ಎಸ್‌ಎನ್: 2278–4497, ಇಂಪ್ಯಾಕ್ಟ್ ಫ್ಯಾಕ್ಟರ್ 6.89 (ಅಂಖಿಖ) ,ಪಿ.ಪಿ–114–20.

ಕೇಂದ್ರದ ಸಹಾಯಕ ಪ್ರಾಧ್ಯಾಪಕರಾದ ಡಾ.ಕುಮಾರ ಬಿ.ಎಂ: ಪೇಪರಿನ ಹೆಸರು ''ಕೊಳಚೆ ಪ್ರದೇಶದಲ್ಲಿ ವಸತಿ ಸಮಸ್ಯೆ: ಮಂಗಳೂರು ನಗರ ಒಂದು ಅಧ್ಯಯನ'' ಪಬ್ಲಿಷ್‌ಡ್ ಆಂಡ್ ಎಡಿಟೆಡ್ ಬುಕ್ ಒನ್ ಅರ್ಬನ್ ಪವರ್ಟಿ ಆಂಡ್ ಸೋಸಿಯಲ್, ಎಡಿಟ್ ಬೈ ದಿನೇಶ ಪಿ.ಟಿ, ಜನವರಿ, ಐಎಸ್‌ಬಿಎನ್: 978–81–923619–8, ಪಬ್ಲಿಷ್‌ಡ್ ಬೈ ಸ್ಪ್ರಿಂಗ್ ಲೀಫ್ ಪಬ್ಲಿಕೇಷನ್ಸ್, ಮೈಸೂರು, ಪಿ.ಪಿ. 80–9.

ಕೇಂದ್ರದ ಸಹಾಯಕ ಪ್ರಾಧ್ಯಾಪಕರಾದ ಡಾ.ಕುಮಾರ ಬಿ.ಎಂ : ಪೇಪರಿನ ಹೆಸರು "ಭಾರತದಲ್ಲಿ ಮಾನವ ಹಕ್ಕುಗಳು ಮತ್ತು ದಲಿತರ ಮೇಲಿನ ಅಪರಾಧಗಳು" ಪಬ್ಲಿಷ್ಡ್ ಇನ್ ದಿ ಕಾನ್‌ಪರೆನ್ಸ್ ಪ್ರೋಸಿಡಿಂಗ್ಸ್ ಒನ್ ಹ್ಯುಮನ್ ರೈಟ್ಸ್: ಕಂಟೆಂಪರರಿ ಇಸ್ಯುಸ್ ಆಂಡ್ ಚಾಲೆಂಜಸ್, ಜನವರಿ, ತುಮಕೂರು ಯುನಿವರ್ಸಿಟಿ.

ಕೇಂದ್ರದ ಸಹಾಯಕ ಪ್ರಾಧ್ಯಾಪಕರಾದ ಡಾ.ಕುಮಾರ ಬಿ.ಎಂ : ಪೇಪರಿನ ಹೆಸರು "ಭಾರತದಲ್ಲಿ ಹಸಿರು ಬ್ಯಾಂಕುಗಳ ಸುಸ್ಥಿರ ಬೆಳವಣಿಗೆ: ವಿಷಯಗಳು ಮತ್ತು ಸವಾಲುಗಳು" ಯಾನ್ ಇಂಟರ್‌ನ್ಯಾಷನಲ್ ಜರ್ನಲ್: ಪಿಇಆರ್‌ಐಪಿಇಯಕ್ಸ್: ಇಂಡಿಯಾನ್ ಜರ್ನಲ್ ಆಫ್ ರಿಸರ್ಚ್, 6(2) ಫೆಬ್ರವರಿ, ಐಎಸ್‌ಎಸ್‌ಎನ್: 2250–1991 , ಇಂಪ್ಯಾಕ್ಟ್ ಫ್ಯಾಕ್ಟರ್ 5.215, ಪಿ.ಪಿ–51–2.

8. **ಸಮ್ಮೇಳನ ಮತ್ತು ವಿಚಾರ ಸಂಕೀರ್ಣ / ತರಭೇತಿಯಲ್ಲಿ ಭಾಗವಹಿಸುವಿಕೆ:**

ಕೇಂದ್ರದ ಸಹಪ್ರಾಧ್ಯಾಪಕರಾದ ಡಾ. ವಿ. ರಾಮಕೃಷ್ಣಪ್ಪರವರು ದಿನಾಂಕ 6 ಮತ್ತು 7 ಡಿಸೆಂಬರ್, 2016 ರಂದು ಡಾ.ಬಿ.ಆರ್. ಅಂಬೇಡ್ಕರ್ ಕೇಂದ್ರ ದಲ್ಲಿ "ಭಾರತದಲ್ಲಿ ದಲಿತ ರಾಜಕೀಯ ಮತ್ತು ಸಬಲೀಕರಣದ ಕುರಿತು ಬಿ.ಆರ್. ಅಂಬೇಡ್ಕರ್ ದೃಷ್ಟಿಕೋನ" ಎಂಬ ವಿಷಯದ ಬಗ್ಗೆ ನಡೆದ ರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ಕೇಂದ್ರದ ಸಹಾಯಕ ಪ್ರಾಧ್ಯಾಪಕರಾದ ಡಾ. ನಾಗರಾಜ್ ಮುಗ್ಗೂರ್‌ರವರು ದಿನಾಂಕ 6 ಮತ್ತು 7 ಡಿಸೆಂಬರ್, 2016 ರಂದು ಡಾ.ಬಿ.ಆರ್. ಅಂಬೇಡ್ಕರ್ ಕೇಂದ್ರ ದಲ್ಲಿ "ಭಾರತದಲ್ಲಿ ದಲಿತ ರಾಜಕೀಯ ಮತ್ತು ಸಬಲೀಕರಣದ ಕುರಿತು ಬಿ.ಆರ್. ಅಂಬೇಡ್ಕರ್ ದೃಷ್ಟಿಕೋನ" ಎಂಬ ವಿಷಯದ ಬಗ್ಗೆ ನಡೆದ ರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ಕೇಂದ್ರದ ಸಹಾಯಕ ಪ್ರಾಧ್ಯಾಪಕರಾದ ಡಾ.ಕುಮಾರ ಬಿ.ಎಂ ರವರು : ಯು.ಜಿ.ಸಿ: ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ, ಮೈಸೂರು ವಿಶ್ವವಿದ್ಯಾನಿಲಯ ಹಮ್ಮಿಕೊಂಡಿದ್ದ 109 ನೇ ಓರಿಯನ್‌ಟೇಷನ್ ಕಾರ್ಯಕ್ರಮದಲ್ಲಿ ದಿನಾಂಕ 17 ಜೂನ್ ರಿಂದ 14 ಜುಲೈ 2016 ರವರೆಗೆ ತರಬೇತಿಯಲ್ಲಿ ಭಾಗವಹಿಸಿದ್ದರು.

ಕೇಂದ್ರದ ಪೋಸ್ಟ್ ಡಾಕ್ಟರಲ್ ಪೆಲೋ ರಾದ ಡಾ. ಶೀಕ್ರಾಂತ ನಾಯಕ ಜಿ ರವರು 15 ರಿಂದ 18 ಮಾರ್ಚ್, 2017 ರವರೆಗೆ ಓರಿಯೆಂಟೇಷನ್ ಪ್ರೋಗ್ರಾಂ ಸೆಂಟರ್ ಫಾರ್ ಮಲ್ಟಿ ಡಿಸಿಪ್ಲೆನರಿ ಡೆವಲಪ್‌ಮೆಂಟ್ ರಿಸರ್ಚ್ ಧಾರವಾಡ(ಐಸಿಎಸ್‌ಎಸ್‌ಆರ್) ನಡೆಸಿದ ಓರಿಯೆಂಟೇಷನ್ ಪ್ರೋಗ್ರಾಂನಲ್ಲಿ ಭಾಗವಹಿಸಿದ್ದರು.

ಕೇಂದ್ರದ ಪೋಸ್ಟ್ ಡಾಕ್ಟರಲ್ ಪೆಲೋ ರಾದ ಡಾ. ಶೀಕ್ರಾಂತ ನಾಯಕ ಜಿ ರವರು ದಿನಾಂಕ 6 ರಿಂದ 10 ಫೆಬ್ರವರಿ 2017 ರವರೆಗೆ ಸೆಂಟರ್ ಫಾರ್ ಡೆವಲಪ್‌ಮೆಂಟ್ ಸ್ಟಡೀಸ್, ತಿರುವಂತನಪುರಂ, ಕೇರಳದಲ್ಲಿ ನಡೆದ ಕಾರ್ಯಗಾರ ಪರಿಶಿಷ್ಟ ಪಂಗಡದ ಮತ್ತು ಅವಕಾಶ ವಂಚಿತ ಗುಂಪುಗಳ ಸಂಶೋಧನಾ ವಿದ್ಯಾರ್ಥಿಗಳು ಮತ್ತು ಬೋಧಕ ವರ್ಗದವರಿ ಕಾರ್ಯಕ್ರಮ ದಲ್ಲಿ ಭಾಗವಹಿಸಿದ್ದರು.

9. **ರಪ್ಪೋರ್ಡಿಯಾರ್/ಮೊಡರೇಟರ್:**

ಕೇಂದ್ರದ ಸಹಾಯಕ ಪ್ರಾಧ್ಯಾಪಕರಾದ ಡಾ.ಕುಮಾರ ಬಿ.ಎಂ ರವರು ದಿನಾಂಕ 18 ಮತ್ತು 19 ಜನವರಿ 2017 ರಲ್ಲಿ ನಡೆದ ಸಗರ ಭಾರತದಲ್ಲಿ ಬಡತನದ ರಚನೆ, ಅಸಮಾನತೆ ಮತ್ತು ಒಳಗೊಳ್ಳುವಿಕೆ: ವಾದ ಮತ್ತು ಚರ್ಚೆ ಕುರಿತಾದ ಎರಡು ದಿನಗಳ ರಾಷ್ಟ್ರೀಯ ವಿಚಾರ ಸಮ್ಮೇಳನದಲ್ಲಿ ರೇಪ್ಪೋರ್ಡಿಯಾರ್ ಆಗಿ ಭಾಗವಹಿಸಿದ್ದರು.

35. ಮಹಿಳಾ ಅಧ್ಯಯನ ಕೇಂದ್ರ

ನಿರ್ದೇಶಕರು: ಡಾ. ಅನಿತಾ ರವಿಶಂಕರ್

ಮಹಿಳಾ ಅಧ್ಯಯನ ಕೇಂದ್ರವು ಎಪ್ರಿಲ್ 2016ರಿಂದ ಮಾರ್ಚ್ 2017ನೇ ಅವಧಿಯಲ್ಲಿ ಹಲವಾರು ಚಟುವಟಿಕೆಗಳನ್ನು ಆಯೋಜಿಸಿದೆ. ಮಂಗಳೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಕಾಲೇಜುಗಳಲ್ಲಿ ಉಪನ್ಯಾಸ ಹಾಗೂ ಲಿಂಗತ್ವ ಕಾರ್ಯಾಗಾರಗಳನ್ನು ನಡೆಸಿದೆ. ಈ ಉಪನ್ಯಾಸ ಮತ್ತು ಕಾರ್ಯಗಾರಗಳು ಎನ್‌ಜಿಒಗಳ ಪ್ರೋತ್ಸಾಹದಿಂದ ನಡೆದಿದೆ. ಮಹಿಳಾ ಅಧ್ಯಯನ ಕೇಂದ್ರದ ಮುಖಾಂತರ ಅಲ್ಪಾವಧಿ ಕೋರ್ಸುಗಳ ಪಠ್ಯಕ್ರಮಗಳನ್ನು ಸಹ ಮಾಡುವ ಒಂದು ಪ್ರಯತ್ನ ಮಾಡಿದ್ದೇವೆ. ಮತ್ತು ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಜೆಂಡರ್ ಚಾಂಪಿಯನ್ ಬಗ್ಗೆ ತರಬೇತಿಯನ್ನು ಪ್ರಾರಂಭಿಸುವುದಕೋಸ್ಕರ ಒಂದು ಲಿಂಗತ್ವ ತರಬೇತಿ ಕೈಪಿಡಿಯನ್ನೂ ಸಹ ಮಾಡಲಾಗಿದೆ. ಕೇಂದ್ರದಿಂದ ಆದ ಚಟುವಟಿಕೆಗಳ ವಿವರಗಳು ಈ ಕೆಳಗಿನಂತಿವೆ:

A. ಉಪನ್ಯಾಸಗಳು:

1. ಮಹಿಳಾ ಅಧ್ಯಯನ ಕೇಂದ್ರವು ದಿನಾಂಕ 01.12.2016ರಂದು ಮಂಗಳೂರು ವಿಶ್ವವಿದ್ಯಾನಿಲಯದ ಹಳೆಯ ಸೆನೆಟ್ ಸಭಾಂಗಣದಲ್ಲಿ ಮಧ್ಯಾಹ್ನ 3.00 ಗಂಟೆಗೆ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಿತ್ತು. ಪ್ರೊ. ಡೇನಿಲ್ ಡ್ರಾಚೆ, ಪ್ರೊಫೆಸರ್ ರಾಜ್ಯಾಶಾಸ್ತ್ರ, ಮತ್ತು ಸೀನಿಯರ್ ರಿಸರ್ಚ್ ಫೆಲೋ, ರೋಬರ್ಟ್ ಸೆಂಟರ್ ಫಾರ್ ಕೆನಡಿಯನ್ ಸ್ಟಡೀಸ್, ಯೋರ್ಕ್ ಯುನಿವರ್ಸಿಟಿ, ಟೊರಾಂಟೊ, ಕೆನಡ ಇವರು Racism and Multiculturalism in Canada: The Case of Missing Aboriginal Women ಈ ವಿಷಯದ ಬಗ್ಗೆ ವಿಶೇಷ ಉಪನ್ಯಾಸವನ್ನು ನೀಡಿದರು. ಈ ಕಾರ್ಯಕ್ರಮದಲ್ಲಿ ಅಧಿಕ ಸಂಖ್ಯೆಯಲ್ಲಿ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು, ಸಂಶೋಧನಾ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಗಳು ಭಾಗವಹಿಸಿದರು. ಹಾಗೂ ಮಂಗಳೂರಿನ ಸಂತ ಅಲೋಷಿಯಸ್ ಕಾಲೇಜಿನ ವಿದ್ಯಾರ್ಥಿಗಳು ಸಂಶೋಧನಾ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ವಿಶ್ವವಿದ್ಯಾನಿಲಯದ ಅಂತರಾಷ್ಟ್ರೀಯ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ಕೆಲವು ವಿಷಯಗಳ ಕುರಿತು ಚರ್ಚಿಸುತ್ತಿದ್ದರು. ಕೇಂದ್ರದ ನಿರ್ದೇಶಕರಾದ ಡಾ. ಅನಿತಾ ರವಿಶಂಕರ್ ಇವರು ಕಾರ್ಯಕ್ರಮಕ್ಕೆ ಬಂದ ಎಲ್ಲರನ್ನೂ ಸ್ವಾಗತಿಸಿದರು ಮತ್ತು ಕೇಂದ್ರದ ಚಟುವಟಿಕೆಗಳ ಕುರಿತು ವಿವರಿಸಿದರು. ಮಂಗಳೂರು ವಿಶ್ವವಿದ್ಯಾನಿಲಯದ ಕುಲಸಚಿವರಾದ ಪ್ರೊ. ಕೆ.ಎಮ್. ಲೋಕೇಶ್ ಇವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು.

2. ಮಹಿಳಾ ಅಧ್ಯಯನ ಕೇಂದ್ರವು ದಿನಾಂಕ 01.12.2016ರಂದು ವಿಶ್ವವಿದ್ಯಾನಿಲಯ ಇವ್ನಿಂಗ್ ಕಾಲೇಜು, ಮಂಗಳೂರು ಇಲ್ಲಿ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಿತ್ತು. ಪ್ರೊ. ಡೇನಿಲ್ ಡ್ರಾಚೆ, ಪ್ರೊಫೆಸರ್ ರಾಜ್ಯಾಶಾಸ್ತ್ರ, ಮತ್ತು ಸೀನಿಯರ್ ರಿಸರ್ಚ್ ಫೆಲೋ, ರೋಬರ್ಟ್ ಫಾರ್ ಕೆನಡಿಯನ್ ಸ್ಟಡೀಸ್, ಯೋರ್ಕ್ ಯುನಿವರ್ಸಿಟಿ, ಟೊರಾಂಟೊ, ಕೆನಡ ಇವರು "Globalization and its Implication for First Nation Women of Canada" ಈ ವಿಷಯದ ಬಗ್ಗೆ ವಿಶೇಷ ಉಪನ್ಯಾಸವನ್ನು ನೀಡಿದರು. ಈ ಕಾರ್ಯಕ್ರಮದಲ್ಲಿ ಕಾಲೇಜಿನ 100ಕ್ಕೂ ಅಧಿಕ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು, ಭಾಗವಹಿಸಿದರು. ಹಾಗೂ ಕಾರ್ಯಕ್ರಮದ ಕೊನೆಯಲ್ಲಿ ಕೆಲವು ವಿಷಯದ ಕುರಿತು ಚರ್ಚಿಸಲಾಯಿತು. ಕಾಲೇಜಿನ ಪ್ರಾಂಶುಪಾಲರಾದ ಡಾ. ಶುಭಾಶಿನಿ ಶ್ರೀವಸ್ತ ಇವರು ಅಧ್ಯಕ್ಷತೆಯನ್ನು ವಹಿಸಿದ್ದರು. ಹಾಗೂ ಉಪನ್ಯಾಸಕರಾದ ಡಾ. ರಾಮಕೃಷ್ಣ ಇವರು ಕಾರ್ಯಕ್ರಮಕ್ಕೆ ಬಂದ ಎಲ್ಲರನ್ನೂ ಸ್ವಾಗತಿಸಿದರು.

3. ಮಹಿಳಾ ಅಧ್ಯಯನ ಕೇಂದ್ರವು ದಿನಾಂಕ 01.03.2017ರಂದು ವಿಶ್ವವಿದ್ಯಾನಿಲಯ ಇವ್ನಿಂಗ್ ಕಾಲೇಜು, ಮಂಗಳೂರು ಇಲ್ಲಿ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಿತ್ತು. ಪ್ರೊ. ಶ್ರೀಪತಿ ಕಲ್ಲೂರಾಯ ಪಿ. ಪ್ರೊಫೆಸರ್ ಅರ್ಥಶಾಸ್ತ್ರ ಮತ್ತು ಹಣಕಾಸು ಅಧಿಕಾರಿ, ಮಂಗಳೂರು ವಿಶ್ವವಿದ್ಯಾನಿಲಯ ಇವರು 'Budget 2017- Implication for Women' ಈ ವಿಷಯದ ಬಗ್ಗೆ ವಿಶೇಷ ಉಪನ್ಯಾಸವನ್ನು ನೀಡಿದರು. ಈ ಕಾರ್ಯಕ್ರಮದಲ್ಲಿ ಕಾಲೇಜಿನ ವಿದ್ಯಾರ್ಥಿಗಳು, ಸಿಬ್ಬಂದಿಗಳು ಭಾಗವಹಿಸಿದರು. ಹಾಗೂ ಕಾರ್ಯಕ್ರಮವು ಪ್ರಕಾಶಮಾನವಾಗಿ ನಡೆಯಿತು.

4. ಮಹಿಳಾ ಅಧ್ಯಯನ ಕೇಂದ್ರವು ದಿನಾಂಕ 28.03.2017ರಂದು ಸ್ಕೂಲ್ ಆಫ್ ಶೋಷಿಯಲ್ ವರ್ಕ್, ರೋಶನಿ ನಿಲಯ, ಮಂಗಳೂರು ಇಲ್ಲಿ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಿತ್ತು. ಡಾ. ಎಂ.ಕೆ. ಜಾರ್ಜ್ ಎಸ್.ಜೆ, ಪ್ರಾಂತೀಯ ಕೇರಳ ಪ್ರಾಂತ್ಯದ ಜೆಸುಹಿಟ್ಸ್‌ನ ಮುಖ್ಯಾಧಿಕಾರಿ ಇವರು 'Women and Christianity' ಈ ವಿಷಯದ ಬಗ್ಗೆ ವಿಶೇಷ ಉಪನ್ಯಾಸವನ್ನು ನೀಡಿದರು. ಈ ಕಾರ್ಯಕ್ರಮದಲ್ಲಿ ರೋಶನಿ ನಿಲಯ ಕಾಲೇಜಿನ ವಿದ್ಯಾರ್ಥಿಗಳು, ಸಿಬ್ಬಂದಿಗಳು ಮತ್ತು ಸೈಂಟ್ ಅಲೋಶಿಯಶ್ ಕಾಲೇಜು, ಮಂಗಳೂರಿನ ವಿದ್ಯಾರ್ಥಿಗಳು ಭಾಗವಹಿಸಿದರು. ಇದಲ್ಲದೆ ಸೈಂಟ್ ಆಂಟ್ಸ್, ಸೈಂಟ್ ಜೆರೊಸ ಕಾನ್ವೆಂಟ್‌ನ ಸಿಸ್ಟರ್‌ಗಳು ಹಾಗೂ ಸುರತ್ಕಲ್, ಬೆಂದೂರ್ ಚರ್ಚ್‌ನಿಂದ ಬಂದ ಜನರು ಮತ್ತು ಮಾಧ್ಯಮದವರು ಭಾಗವಹಿಸಿದರು. ಕಾರ್ಯಕ್ರಮದ ಕೊನೆಯಲ್ಲಿ ಮದುವೆ, ವಿಚ್ಛೇದನೆ, ಮಕ್ಕಳ ಸಾಮಾಜೀಕರಣ, ಹಾಗೂ ಪಿತೃಪ್ರಭುತ್ವ ಮತ್ತು ಚರ್ಚಿನ ಬಗ್ಗೆ ಗಂಭೀರವಾಗಿ ಚರ್ಚಿಸಲಾಯಿತು.

B. ಕಾರ್ಯಾಗಾರಗಳು:

1. ಭಾರತದ ಸಂವಿಧಾನದ ಆರ್ಟಿಕಲ್ 15ರಲ್ಲಿ ಹೇಳಿದ ಲಿಂಗತ್ವ ಸಮನ್ಯಾಯವನ್ನು ಮುನ್ನೆಲೆಗೆ ತರಲು ಮನೆ, ಶಾಲೆ, ಕೆಲಸದ ಸ್ಥಳ ಇತ್ಯಾದಿ ಎಲ್ಲಾ ನೆಲೆಗಳಲ್ಲಿಯು ಸಂವಹನದಲ್ಲಿ ಬದಲಾವಣೆಯನ್ನು ತರಬೇಕಾದ ಅಗತ್ಯವಿದೆ. ಅಂತಹ ಒಂದು ಪರಿಸರವನ್ನು ನಿರ್ಮಾಣ ಮಾಡಲು ಭಾರತ ಸರ್ಕಾರವು ದೇಶದ ಎಲ್ಲೆಡೆಯ ಶಾಲೆ ಮತ್ತು ಕಾಲೇಜುಗಳಲ್ಲಿ ಜೆಂಡರ್ ಚಾಂಪಿಯನ್ಸ್‌ಗಳನ್ನು ನಿಯೋಜಿಸುತ್ತಿದೆ. ಜೆಂಡರ್ ಚಾಂಪಿಯನ್ ಆಗಲು ಹುಡುಗ/ಹುಡುಗಿ 16 ವರ್ಷಕ್ಕಿಂತ

ಮೇಲ್ಪಟ್ಟವರು ಆಗಬಹುದು ಈ ಕಾರ್ಯವು ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ ಹಾಗೂ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯಗಳ ಸಹಭಾಗಿತ್ವದಲ್ಲಿ ಆರಂಭಗೊಂಡಿದೆ.

ಜೆಂಡರ್ ಚಾಂಪಿಯನ್ ಎನ್ನುವುದು ಮಹಿಳೆಯರನ್ನು ಘನತೆ ಮತ್ತು ಗೌರವದಿಂದ ಕಾಣುವಂತಹ ಪರಿಸರವನ್ನು ನಿರ್ಮಿಸಲು ಜವಾಬ್ದಾರಿಯುತ ನಾಯಕರನ್ನು ರೂಪಿಸುವುದಾಗಿದೆ. ಅಂತಹ ನಾಯಕರು ಯುವ ಪೀಳಿಗೆಯಲ್ಲಿ ಲಿಂಗಸಮಾನತೆ, ಲಿಂಗತ್ವ ನ್ಯಾಯ ಒದಗಿಸುವಲ್ಲಿ ಗಮನಾರ್ಹ ಪ್ರಗತಿಯನ್ನು ರೂಪಿಸಬಲ್ಲರು ಎಂಬುದು ಈ ಯೋಜನೆಯ ಹಿಂದಿನ ಆಶಯವಾಗಿದೆ.

ಕಾಲೇಜುಗಳಲ್ಲಿ ಜೆಂಡರ್ ಚಾಂಪಿಯನ್ ಮಾಡಬೇಕಾದರೆ ಇದಕ್ಕೆ ತರಬೇತಿ ನೀಡುವವರು ಇದರ ಸಲುವಾಗಿ ಒಂದು ಲಿಂಗತ್ವ ತರಬೇತಿ ಕೈಪಿಡಿ (Gender Training Manual)ನ್ನು ಮಾಡಬೇಕಾಗಿದೆ. ಇದು ತರಬೇತಿಯು ಉನ್ನತ ಮಟ್ಟದಲ್ಲಿ ನಡೆಯಲು ಸಹಾಯಕಾರಿಯಾಗಿದೆ. ಇದರ ಮೊದಲ ಹಂತವಾಗಿ ಈ ಜೆಂಡರ್ ಚಾಂಪಿಯನ್ ತರಬೇತಿಯಲ್ಲಿ ಯಾವ ವಿಷಯಗಳಿರಬೇಕು ಯಾರು ಈ ವಿಷಯ ಬರೆಯುತ್ತಾರೆ. ಇದನ್ನು ಚರ್ಚಿಸಲು 07.01.2017 ಮತ್ತು 10.03.2017ರಂದು ಎರಡು ಕಾರ್ಯಗಾರಗಳನ್ನು ಸರ್ಕಾರೇತರ ಸಂಸ್ಥೆಗಳಲ್ಲಿ ಕೆಲಸ ಮಾಡುವ ತಜರೊಂದಿಗೆ ನಡೆಸಲಾಯಿತು. ಈ ಕಾರ್ಯಗಾರದಲ್ಲಿ ಮಾಡ್ಯೂಲ್ಗಳ ತರಬೇತಿ ಮತ್ತು ವಿಧಾನದ ಬಗ್ಗೆ ಕೂಡ ನಿರ್ಧಾರ ಮಾಡಲಾಯಿತು.

2. ಮಹಿಳಾ ಅಧ್ಯಯನ ಕೇಂದ್ರವು ದಿನಾಂಕ 06.02.2017ರಂದು ಲಕ್ಷ್ಮೀ ಸೋಮ ಬಂಗೇರ ಸರಕಾರಿ ಪ್ರಥಮ ದರ್ಜೆ ಕಾಲೇಜು, ಕೋಟ, ಪಡುಕೆರೆ ಇಲ್ಲಿ ಲಿಂಗತ್ವ ಸೂಕ್ಷ್ಮತಾ ಕಾರ್ಯಗಾರವನ್ನು ಆಯೋಜಿಸಿತ್ತು. ಶ್ರೀಮತಿ ಮರ್ಲಿನ್ ಮಾರ್ಟಿಸ್, ನಿರ್ದೇಶಕರು, ಡೀಡ್ಸ್, ಡ್ರ್. ಶೋಭಾದೇವಿ ಎಮ್.ಜಿ ಮಂಗಳೂರು ಇವರು ಸಂಪನ್ಮೂಲ ವ್ಯಕ್ತಿಗಳಾಗಿದ್ದರು. ಇವರು ಗ್ರಾಮೀಣ ವಿದ್ಯಾರ್ಥಿಗಳಿಗೆ ಲಿಂಗತ್ವ ಸೂಕ್ಷ್ಮತಾ ಕಾರ್ಯಗಾರದಲ್ಲಿ ಮುಖ್ಯವಾಗಿ ಲಿಂಗ, ಸಮಾಜದಲ್ಲಿ ಗಂಡು ಹೆಣ್ಣಿಗಿರುವ ಸಮಾನತೆ, ಸಮಜದಲ್ಲಿ ಇರುವ ಪಾತ್ರ ಮತ್ತು ಮಹಿಳೆ ಮತ್ತು ಹೆಣ್ಣುಮಕ್ಕಳ ಕಾನೂನಿನ ವಿಷಯದ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಕಾಲೇಜಿನ 64 ಗಂಡು ಮತ್ತು ಹೆಣ್ಣು ವಿದ್ಯಾರ್ಥಿಗಳು ಭಾಗವಹಿಸಿದರು. ಹಾಗೂ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ತಮ್ಮನ್ನು ಚಟುವಟಿಕೆಯಿಂದ ಕೂಡಿಸಿಕೊಂಡರು.

3. ಮಹಿಳಾ ಅಧ್ಯಯನ ಕೇಂದ್ರವು ದಿನಾಂಕ 09.02.2017ರಂದು ಮಾಧವ ಪೈ ಮೆಮೊರಿಯಲ್ ಕಾಲೇಜು, ಮಣಿಪಾಲ ಇಲ್ಲಿ 'Representation of Women in Media' ಎಂಬ ವಿಷಯದ ಬಗ್ಗೆ ಕಾರ್ಯಗಾರವನ್ನು ಆಯೋಜಿಸಿತ್ತು. ಡಾ. ಶುಭಾ, ಸಹ ಪ್ರಾಧ್ಯಾಪಕರು, ಸ್ಕೂಲ್ ಆಫ್ ಕಮ್ಯೂನಿಕೇಶನ್, ಮಣಿಪಾಲ್ ವಿಶ್ವವಿದ್ಯಾನಿಲಯ, ಮಣಿಪಾಲ ಇವರು ಸಂಪನ್ಮೂಲ ವ್ಯಕ್ತಿಯಾಗಿದ್ದರು. ಇವರು ಈ ಕಾರ್ಯಗಾರದಲ್ಲಿ ವಿದ್ಯಾರ್ಥಿಗಳಿಗೆ ಪವರ್ ಪೊಯಿಂಟ್ ಪ್ರಸ್ತುತಿ ಮಾಡುವುದರ ಮೂಲಕ ಕೆಲವು ಪರಿಕಲ್ಪನೆಗಳ ಬಗ್ಗೆ ತಿಳಿಸಿಕೊಟ್ಟರು. ಮತ್ತು ಕೆಲವು ಚಲನಚಿತ್ರದ ತುಣುಕುಗಳು, ಪೇಪರ್ ತುಣುಕುಗಳನ್ನು ವಿದ್ಯಾರ್ಥಿಗಳಿಗೆ ನೀಡಿದರು. ಮತ್ತು ವಿದ್ಯಾರ್ಥಿಗಳೊಡನೆ ಈ ವಿಷಯಕ್ಕೆ ಸಂಬಂಧಿಸಿ ಚರ್ಚೆ ಮಾಡಿದರು.

ಅ. ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ:

ಮಹಿಳಾ ಅಧ್ಯಯನ ಕೇಂದ್ರವು ದಿನಾಂಕ 08.03.2017ರಂದು ಮಂಗಳೂರು ವಿಶ್ವವಿದ್ಯಾನಿಲಯದ ಮಂಗಳಾ ಸಭಾಂಗಣದಲ್ಲಿ ಅಂತರ್‌ರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸಿತು. ಈ ಆಚರಣೆ ಎರಡು ಹಂತದಲ್ಲಿತ್ತು. ಮೊದಲನೆಯ ಹಂತದಲ್ಲಿ ಸ್ವರಕ್ಷಣೆ ಕಲಿಸುವುದರಲ್ಲಿ ಪರಿಣಿತರಾದ ಶ್ರೀ. ಕಾರ್ತಿಕ್ ಕಟೀಲ್ ಮತ್ತು ಅವರ ತಾಯಿ ಶೋಭಾಲತಾ ಅವರು ಮುಖ್ಯವಾಗಿ ಹುಡುಗಿಯರಿಗೆ, ಮಹಿಳೆಯರಿಗೆ ತಮ್ಮನ್ನು ತಾವು ಹೇಗೆ ರಕ್ಷಣೆ ಮಾಡಿಕೊಳ್ಳುವುದು ಎಂದು ಸ್ವರಕ್ಷಣೆಯ ವಿಧಾನದ ಮೂಲಕ ತಿಳಿಸಿಕೊಟ್ಟರು. ಮತ್ತು ಕಾರ್ಯಕ್ರಮಕ್ಕೆ ಬಂದ 950ಕ್ಕೂ ಹೆಚ್ಚು ಜನರನ್ನು ಈ ವಿಧಾನದ ಮೂಲಕ ಮರಳುಗೊಳಿಸಿದರು.

ಎರಡನೆಯ ಭಾಗದಲ್ಲಿ ಮಹಿಳಾ ದಿನಾಚರಣೆಯ ಕುರಿತು ಉಪನ್ಯಾಸ ಹಾಗೂ ಮಹಿಳಾ ಸಾಧಕಿಯರಿಗೆ ಸನ್ಮಾನ ಕಾರ್ಯಕ್ರಮ ನಡೆಯಿತು. ಮಂಗಳೂರು ವಿಶ್ವವಿದ್ಯಾನಿಲಯದ ಇತಿಹಾಸದಲ್ಲಿ ಮೊದಲನೆ ಭಾರಿಗೆ ಮಹಿಳಾ ದಿನಾಚರಣೆಯನ್ನು ವಿದ್ಯಾರ್ಥಿಗಳು, ಸಂಶೋಧನಾ ವಿದ್ಯಾರ್ಥಿಗಳು, ಶಿಕ್ಷಕ/ ಶಿಕ್ಷಕೇತರ ಸಿಬ್ಬಂದಿಗಳು ಒಟ್ಟು ಸೇರಿ ಆಚರಿಸಿದರು. ಕೇಂದ್ರದ ನಿರ್ದೇಶಕರಾದ ಡಾ. ಅನಿತಾ ರವಿಶಂಕರ್ ಇವರು ಕಾರ್ಯಕ್ರಮಕ್ಕೆ ಬಂದ ಎಲ್ಲರನ್ನೂ ಸ್ವಾಗತಿಸಿದರು. ಹಾಗೂ ಮಹಿಳಾ ದಿನಾಚರಣೆಯ ಪ್ರಾಮುಖ್ಯತೆಯ ಬಗ್ಗೆ ತಿಳಿಸಿದರು ಹಾಗೂ ಕೇಂದ್ರದ ಚಟುವಟಿಕೆಗಳ ಕುರಿತು ವಿವರಿಸಿದರು. ಪ್ರೊ. ಭುವನೇಶ್ವರಿ ಹೆಗಡೆ, ಸಹ ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಮತ್ತು ಖ್ಯಾತ ಲೇಖಕಿ ಇವರು ಮಹಿಳಾ ದಿನಾಚರಣೆಯ ಬಗ್ಗೆ ವಿಶೇಷ ಉಪನ್ಯಾಸ ನೀಡಿದರು. ಮಹಿಳೆಯ ಮೇಲೆ ಆಗುವ ದೌರ್ಜನ್ಯದ ಬಗ್ಗೆ ಹೋರಾಟ ಮಾಡಬೇಕೆಂದು ತಿಳಿಸಿದರು. ಕೇಂದ್ರದಿಂದ ಸನ್ಮಾನಿಸಲ್ಪಡುವ 5 ಜನರಿಗೆ ಹೂ ಗುಚ್ಛ ನೀಡಿ ಸ್ವಾಗತಿಸಲಾಯಿತು ಮತ್ತು ಅಂತರ್‌ರಾಷ್ಟ್ರೀಯ ಮಹಿಳಾ ವಿದ್ಯಾರ್ಥಿಗಳಿಗೆ ಹೂ ಗುಚ್ಛ ನೀಡಲಾಯಿತು. ಮಂಗಳೂರು ವಿಶ್ವವಿದ್ಯಾನಿಲಯದ ಕುಲಸಚಿವರಾದ ಪ್ರೊ.ಕೆ.ಎಮ್ ಲೋಕೆಶ್ ಇವರು ಅಧ್ಯಕ್ಷತೆಯನ್ನು ವಹಿಸಿದ್ದರು.

ಮಂಗಳೂರು ವಿಶ್ವವಿದ್ಯಾನಿಲಯದ ಮಹಿಳಾ ಅಧ್ಯಯನ ಕೇಂದ್ರವು 5 ಮಹಿಳಾ ಸಾಧಕಿಯರನ್ನು ಸನ್ಮಾನಿಸಲು ಆಯ್ಕೆ ಮಾಡಿತ್ತು. ಇವರು ತಮ್ಮ ಜೀವನದಲ್ಲಿ ಬಂದ ಕಷ್ಟಗಳನ್ನು ಹಿಮ್ಮೆಟ್ಟಿ ನಿಂತು ತಮ್ಮನ್ನು ತಾವು ಗಣ್ಯ ಸ್ಥಾನದಲ್ಲಿ ರೂಪಿಸಿಕೊಂಡವರು. ಸನ್ಮಾನಿಸಲಾದವರು ಈ ಕೆಳಗಿನ 5 ಮಂದಿಯಾಗಿದ್ದಾರೆ.

1. ಶ್ರೀ. ಕಾರ್ತಿಕ್ ಕಟೀಲ್ ಮತ್ತು ಶೋಭಾಲತಾ ಇವರು ಕರ್ನಾಟಕದಲ್ಲಿ 1.00,000 ಕ್ಕಿಂತಲೂ ಹೆಚ್ಚು ಹುಡುಗಿಯರಿಗೆ ಮತ್ತು ಮಹಿಳೆಯರಿಗೆ ಸ್ವರಕ್ಷಣೆ ವಿಧಾನಗಳನ್ನು ತಿಳಿಸಿಕೊಟ್ಟಿದ್ದಾರೆ.

2. ಶ್ರೀಮತಿ ರಾಧಿಕಾ ಇವರು ಕಾವೇರಿ ಎಂಬ ಹೆಸರಿನ ಅಂಬ್ಯುಲೆನ್ಸ್ ಡ್ರೈವರ್ ಮತ್ತು ಕೆಲವು ಅಂಬ್ಯುಲೆನ್ಸ್‌ಗಳ ಒಡತಿಯಾಗಿರುತ್ತಾರೆ.

3. ಶ್ರೀಮತಿ ವೇದಾವತಿ ಗಟ್ಟಿ ಇವರು ಗ್ರಾಮ ಪಂಚಾಯತ್‌ನ ಸದಸ್ಯರಾಗಿರುತ್ತಾರೆ. ಮತ್ತು ತಮ್ಮ ಜೀವನದಲ್ಲಿ ಬಂದ ಕಷ್ಟವನ್ನೆಲ್ಲಾ ಎದುರಿಸಿ ಸ್ವಾವಲಂಭಿಯಾಗಿರುತ್ತಾರೆ.
4. ಶ್ರೀಮತಿ ಮುತ್ತು ಶೆಟ್ಟಿ ಇವರು ಗ್ರಾಮ ಪಂಚಾಯತ್‌ನ ಸದಸ್ಯರಾಗಿರುತ್ತಾರೆ. ಮತ್ತು ಇವರು ತಮ್ಮ ಹಳ್ಳಿಯ ಜನರಿಗಾಗಿ ರೋಡಿನ ವ್ಯವಸ್ಥೆಯನ್ನು ಮಾಡಿಕೊಟ್ಟಿರುತ್ತಾರೆ.

5. ಶ್ರೀಮತಿ ನಯನಾ ಇವರು ಮಂಗಳೂರು ವಿಶ್ವವಿದ್ಯಾನಿಲಯದ ಹಳೆ ವಿದ್ಯಾರ್ಥಿಯಾಗಿದ್ದು, ಈಗ ಡೆಕ್ಕಾನ್ ಹೆರಾಲ್ಡ್, ಮಂಗಳೂರು ವಿಭಾಗದಲ್ಲಿ ಸಬ್ ಎಡಿಟರ್ ಆಗಿರುತ್ತಾರೆ.

ಈ ಸಭಾ ಕಾರ್ಯಕ್ರಮದ ನಂತರ ಮಂಗಳೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು, ಸಂಶೋಧನಾ ವಿದ್ಯಾರ್ಥಿಗಳು, ಶಿಕ್ಷಕ/ ಶಿಕ್ಷಕೇತರ ಸಿಬ್ಬಂದಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಅರ್ಥಪೂರ್ಣವಾಗಿ ನಡೆಯಿತು.

ಆ. ಸಮಾವೇಶದಲ್ಲಿ ಭಾಗವಹಿಸಿರುವುದು:

ಡಾ. ಅನಿತಾ ರವಿಶಂಕರ್, ನಿರ್ದೇಶಕರು, ಮಹಿಳಾ ಅಧ್ಯಯನ ಕೇಂದ್ರ, ಮಂಗಳೂರು ವಿದ್ಯಾನಿಲಯ ಇವರು ದಿನಾಂಕ 14–16, 2017ರಂದು ನಡೆದ ಕೇರಳದ, ಕೇಂದ್ರೀಯ ವಿಶ್ವವಿದ್ಯಾನಿಲಯ, ಕಾಸರಗೋಡಿನಲ್ಲಿ ಇಲ್ಲಿ ನಡೆದ Mapping 21st Century Indian Political Documentary Films' ಎಂಬ ಅಂತರ್‌ರಾಷ್ಟ್ರೀಯ ಸೆಮಿನಾರ್‌ನಲ್ಲಿ 'Reframing the National Imaginary: Documenting the Politics of Poverty in Postmillennial India' ಎಂಬ ವಿಷಯದ ಕುರಿತು ಪ್ರಬಂಧವನ್ನು ಮಂಡಿಸಿದರು.

36. ಗ್ರಾಮೀಣ ಬ್ಯಾಂಕಿಂಗ್ ಮತ್ತು ವ್ಯವಸ್ಥಾಪನಾ ಪೀಠ

ಸಂಯೋಜಕರು: ಡಾ. ಈಶ್ವರ. ಪಿ

37. ಕಾರ್ಪೊರೇಶನ್ ಬ್ಯಾಂಕ್ ಪೀಠ

ಸಂಯೋಜಕರು: ಪ್ರೊ. ಅರಬಿ ಯು.

38. ಧರ್ಮನಿಧಿಯೋಗ ಪೀಠ

ಸಂಯೋಜಕರು : ಡಾ. ಕೆ. ಕೃಷ್ಣ ಶರ್ಮ

1. ಅಧ್ಯಾಪಕ ವರ್ಗ :

ಕ್ರ. ಸಂ	ಹೆಸರು	ಹುದ್ದೆ	ಶೈಕ್ಷಣಿಕ ಅರ್ಹತೆ	ಪ್ರಾವೀಣ್ಯತೆಯ ಕ್ಷೇತ್ರ
1.	ಡಾ. ಕೆ. ಕೃಷ್ಣ ಶರ್ಮ	ಸಹಾಯಕ ಪ್ರಾಧ್ಯಾಪಕರು ಮತ್ತು ಸಂಯೋಜಕರು	ಎ0.ಎ., ಎಂ.ಎಸ್.ಸ್ಸಿಪಿ.ಹೆಚ್.ಡಿ., ಪಿ.ಜಿ.ಡಿವೈಟಿ.,	i) ಯೋಗ ವಿಜ್ಞಾನ ii) ಯೋಗ ಚಿಕಿತ್ಸೆ.
2.	ಡಾ. ತಿರುಮಲೇಶ್ವರ ಪ್ರಸಾದ ಎಚ್.	ಅತಿಥಿ ಉಪನ್ಯಾಸಕರು/ ಯೋಗ ಕಂಸಲ್ಟೆಂಟ್	ಎಂ.ಎಸ್ಸಿ., ಪಿಹೆಚ್.ಡಿ	ಯೋಗ ಚಿಕಿತ್ಸೆ.
3.	ಡಾ. ಉದಯಕುಮಾರ ಕೆ.	ಅತಿಥಿ ಉಪನ್ಯಾಸಕರು/ ಯೋಗ ಕಂಸಲ್ಟೆಂಟ್	ಎಂ.ಎಸ್ಸಿ., ಪಿಹೆಚ್.ಡಿ	ಯೋಗ ಚಿಕಿತ್ಸೆ.
4.	ಕು. ಮೈಥಿಲಿ ಪರ್ಕಲ	ರೀಸರ್ಚ್ ಫೆಲೋ	ಎಂ.ಎಸ್ಸಿ.	ಯೋಗ ಚಿಕಿತ್ಸೆ.

2. ಶಿಕ್ಷಕರು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ವಿಚಾರಸಂಕಿರಣ/ಕಮ್ಮಟಗಳಲ್ಲಿ ಮಂಡಿಸಿದ ಪ್ರಬಂಧಗಳು :

1. ಶರ್ಮ ಕೆ.ಕೆ.(2017), ''ಡೈಯಗ್ನೋಸ್ಟಿಕ್ ಮೆಥಡ್ಸ್ ಇನ್ ಯೋಗ ಥರಪಿ'', ಇಂಟರ್ನ್ಯಾಷನಲ್ ಟೀಚರ್ಸ್ ಟ್ರೈನಿಂಗ್ ಪ್ರೋಗ್ರಾಂ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ, 2 – 5 ಫೆಬ್ರವರಿ.
2. ತಿರುಮಲೇಶ್ವರ ಪ್ರಸಾದ ಹೆಚ್.(2017), ''ಯೋಗ ಫಾರ್ ಒಬೆಸಿಟಿ'', ಇಂಟರ್ನ್ಯಾಷನಲ್ ಟೀಚರ್ಸ್ ಟ್ರೈನಿಂಗ್ ಪ್ರೋಗ್ರಾಂ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ, 2 – 5 ಫೆಬ್ರವರಿ.
3. ಉದಯಕುಮಾರ ಕೆ.(2015), ''ಯೋಗ ಫಾರ್ ಬ್ರಾಂಕಿಯಲ್ ಅಸ್ತಮ'', ಇಂಟರ್ನ್ಯಾಷನಲ್ ಟೀಚರ್ಸ್ ಟ್ರೈನಿಂಗ್ ಪ್ರೋಗ್ರಾಂ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ, 2 – 5 ಫೆಬ್ರವರಿ.
4. ಶರ್ಮ ಕೆ.ಕೆ.(2017), ಅತಿಥಿ ಭಾಷಣ, ''ಥೆರಪಿಯೋಟಿಕ್ ಎಪ್ಲಿಕೇಷನ್ ಆಫ್ ಯೋಗ ಫಾರ್ ಹೆಚ್ಐವಿ/ಎಡ್ಸ್'', ಅಂತರರಾಷ್ಟ್ರೀಯ ಸಮ್ಮೇಳನ ಒನ್ ಸೋಷಿಯಲ್ ಟ್ರಾನ್ಸ್ಫಾರ್ಮೇಷನ್ ತ್ರೂ ಯೋಗ, ಹರಿದ್ವರ, 25 – 26 ಮಾರ್ಚ್.

3. ಮೇಲಿನ ಅವಧಿಯಲ್ಲಿ ಯೋಗ ಚಿಕಿತ್ಸಾ ಕೇಂದ್ರದ ಚಟುವಟಿಕೆಗಳು :

1. (ಅ) ಯೋಗ ಚಿಕಿತ್ಸೆಯನ್ನು ಪಡೆದ ಹಳೆ ರೋಗಿಗಳು – **47,343**

(ಆ) ಯೋಗ ಚಿಕಿತ್ಸೆ ನೀಡಲ್ಪಟ್ಟ ಹೊಸ ರೋಗಿಗಳ **ಒಟ್ಟು ಸಂಖ್ಯೆ – 103**

(ಇ) ದಿನವೊಂದಕ್ಕೆ ಯೋಗ ಚಿಕಿತ್ಸೆಯನ್ನು ಪಡೆದ ಸರಾಸರಿ ರೋಗಿಗಳು – **15 – 20**

(ಈ) ಯೋಗ ಚಿಕಿತ್ಸೆಯ ಮೂಲಕ ಸಂಗ್ರಹಿಸಿದ **ಒಟ್ಟು ಮೊತ್ತ ರೂ. 58,200/–**

2. **ಈ ಕೆಳಗಿನ ರೋಗಗಳಿಗೆ ಯೋಗ ಚಿಕಿತ್ಸೆಯನ್ನು ನೀಡಲಾಗಿದೆ :**

ಹೈಪರ್ಟೆನ್ಷನ್, ಡಯಾಬಿಟೀಸ್, ಒಬೆಸಿಟಿ, ಬ್ಯಾಕ್ ಎಕ್, ಹೈಪರ್ ಎಸಿಡಿಟಿ, ಒಸ್ಟಿಯೋಅರ್ತರೈಟೀಸ್, ಅಸ್ತಮ, ಸೈನ್ಸೈಟೀಸ್, ಮೆಲಿಟಸ್, ನೀ ಜೋಯಿಂಟ್ಪೈನ್ಸ್, ಥೈರಾಯಿಡ್ ಪ್ರಾಬ್ಲಮ್, ಸೋರಿಯಸಿಸ್, ರುಮೆಟಾಯಿಡ್ ಅರ್ತರೈಟೀಸ್, ಹೈಪರ್ಥೈರೋಡಿಸಂ, ಬ್ರೆತ್ಲೆಸ್ನೆಸ್, ಮೆನೋಪೊಸಲ್ ಪ್ರಾಬ್ಲಮ್, ಆನಕ್ಸಿಟಿ, ಬ್ರೊನ್ಕೈಟೀಸ್, ಮಲ್ಟಿಪುಲ್ ಜ್ಯಾಯಿಂಟ್ ಪೈನ್ಸ್, ಒಕ್ಯೂಪೇಸನಲ್ ಸ್ಟ್ರೆಸ್, ಮೈಗ್ರೇನ್ ಹೆಡ್ ಎಕ್, ಅಲರ್ಜಿ, ಇನ್ಸೋಮ್ನಿಯಾ, ಪೆಪ್ಟಿಕ್ ಅಲ್ಸರ್, ಶೊಲ್ಡರ್ ಪೈನ್, ಹಿಪ್ ಜೊಯಿಂಟ್ ಪೈನ್, ಬ್ರೇತ್ಲೆಸ್ನೆಸ್, ಗ್ಯಾಸ್ಟ್ರೈಟೀಸ್, ಅಲರ್ಜಿ, ಇರೆಗ್ಯುಲರ್ ಮೆನ್ಸುಟ್ರುವಲ್ ಸೈಕಲ್, ಡಿಪ್ರೇಶನ್, ಇನ್ಸೋಮ್ನಿಯ, ಲ್ಯಾಕ್ ಆಫ್ ಮೆಮೋರಿ, ಸರ್ವಿಕಲ್ ಸ್ಪೊಂಡಿಲೋಸಿಸ್, ಮಿಗ್ರೈನ್ ಹೆಡ್ ಎಕ್, ಕ್ರೋನಿಕ್ ಕೋಲ್ಡ್, ಡಿಸ್ಮೆನೋರಿಯಾ, ಪುವರ್ ಡೈಜೆಸನ್, ಇಸ್ಕೆಮಿಕ್ ಹಾರ್ಟ್ ಡಿಸೀಸ್, ಲಿಗಾಮೆಂಟ್ ಪ್ರಾಬ್ಲಮ್, ಆನಿಮಿಯಾ, ಮಲ್ಟೀಪುಲ್ ಸ್ಕ್ಲೀರೋಸಿಸ್, ಪೊಲಿಅರ್ತಲ್ಜಿಯಾ, ಸ್ಪೀಚ್ ಪ್ರಾಬ್ಲಮ್, ಅಂಡರ್ ವೈಟ್ , ಜನರಲ್ ಇಪ್ರೂಮೆಂಟ್.

4. <u>ಇಂಟರ್ನ್ಯಾಷನಲ್ ಯೋಗ ಟೀಚರ್ಸ್ ಟ್ರೈನಿಂಗ್ ಪ್ರೋಗ್ರ್ಯಾಂ 2ನೇ ಫೆಬ್ರವರಿಯಿಂದ 5ನೇ ಫೆಬ್ರವರಿ, 2017:</u>

ಮಾನವಪ್ರಜ್ಞೆ ಮತ್ತು ಯೋಗ ವಿಜ್ಞಾನ ವಿಭಾಗ ಮತ್ತು ಧರ್ಮನಿಧಿ ಯೋಗ ಪೀಠ, ಮಂಗಳೂರು ವಿಶ್ವವಿದ್ಯಾನಿಲಯ ಹಾಗೂ ವೊಂಕ್ವ್ಯಾಂಗ್ ಡಿಜಿಟಲ್ ಯೂನಿವರ್ಸಿಟಿ, ಸೌತ್ ಕೊರಿಯಾ ಇವುಗಳ ಸಹಯೋಗದೊಂದಿಗೆ ಮಾನವಪ್ರಜ್ಞೆ ಮತ್ತು ಯೋಗ ವಿಜ್ಞಾನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ''ಇಂಟರ್ನ್ಯಾಷನಲ್ ಯೋಗ ಟೀಚರ್ಸ್ ಟ್ರೈನಿಂಗ್ ಪ್ರೋಗ್ರ್ಯಾಂ''ನ್ನು ದಿನಾಂಕ 2ನೇ ಫೆಬ್ರವರಿಯಿಂದ 5ನೇ ಫೆಬ್ರವರಿ 2017ರ ವರೆಗೆ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಏರ್ಪಡಿಸಲಾಗಿತ್ತು.

ನಾಲ್ಕು ದಿನಗಳ ಕಾರ್ಯಕ್ರಮವನ್ನು 2ನೇ ಫೆಬ್ರವರಿ 2017 ರಂದು ಶ್ರೀ. ಬಿ. ರಮಾನಾಥ ರೈ, ಗೌರವಾನ್ವಿತ ಸಚಿವರು, ಮಾನ್ಯ ಅರಣ್ಯ ಮತ್ತು ಪರಿಸರ ಖಾತೆ ಸಚಿವರು ಮತ್ತು ದ.ಕ ಜಿಲ್ಲಾ ಉಸ್ತುವಾರಿ ಸಚಿವರು ಉದ್ಘಾಟಿಸಿದರು. ಮಂಗಳೂರು ವಿಶ್ವವಿದ್ಯಾನಿಲಯದ ಗೌರವಾನ್ವಿತ ಕುಲಪತಿಗಳಾದ ಪ್ರೊ. ಕೆ. ಬೈರಪ್ಪರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮದಲ್ಲಿ ನಡೆದ ಮುಖ್ಯ ಅತಿಥಿಗಳಾಗಿದ್ದವರು ಡಾ. ಸತೀಶ್ ದತ್ತಾತ್ರೇಯ ರಾವ್ ಪಾಠ್ಕ್, ರಿಸರ್ಚ್ ಆಫಿಸರ್, ಪಿಸಿಒಲೊಜಿ, ಸೈನ್ಟ್ಫಿಕ್ ರಿಸರ್ಚ್ ವಿಭಾಗ, ಕೈವಲ್ಯಧಾಮ, ಲೊನಾವಲ, ಮಹಾರಾಷ್ಟ್ರ. ನಾಲ್ಕು ದಿನಗಳ ಈ ಕಾರ್ಯಕ್ರಮದಲ್ಲಿ ಶ್ರೀ ಎನ್.ಕೆ. ಹೀರೇಗೌಡರ್, ನಿರ್ದೇಶಕರು, ಒಜಸ್ವಿ ಯೋಗ ಶಾಲಾ, ಓಎಂ ಬ್ಲೆಸ್ಡ್ ಕೋಟೇಜ್, ಬದರಿನಾಥ ರೋಡ್, ತಪೋವನ್, ರಿಷಿಕೇಶ್, ಉತ್ತರಾಖಿಂಡ್ ಮತ್ತು ಡಾ. ಎ.ಆರ್ ಸೀತಾರಾಮ್, ಸ್ಥಾಪಕ ನಿರ್ದೇಶಕರು, ಪರಮಹಂಸ ಯೋಗ ಥರಪಿ ಸೆಂಟರ್, ಮೈಸೂರು ಸೇರಿದಂತೆ 8 ಮಂದಿ ಸಂಪನ್ಮೂಲ ವ್ಯಕ್ತಿಗಳಿದ್ದರು. ಈ ನಾಲ್ಕು ದಿನಗಳ ಅಂತರರಾಷ್ಟ್ರೀಯ ಕಾರ್ಯಾಕ್ರಮದಲ್ಲಿ 29 ವಿದೇಶಿ ಮತ್ತು 108 ಭಾರತೀಯ ಪ್ರತಿನಿಧಿಗಳು ಭಾಗವಹಿಸಿದ್ದರು.

ಆ) ಎರಡು 'ಪ್ರಚಾರೋಪನ್ಯಾಸ'ಗಳನ್ನು ವಿವಿಧ ಸ್ಥಳಗಳಲ್ಲಿ ನೀಡಲಾಯಿತು.

1. ಶರ್ಮ ಕೆ.ಕೆ.(2017), ''ಎಫೆಕ್ಟ್ ಆಫ್ ಯೋಗ ಒನ್ ಹೈಪರ್ಟೆಂಷನ್'', ಪ್ರಚಾರೋಪನ್ಯಾಸ, ಕೆ.ಎಸ್.ಆರ್.ಪಿ ಬೊಟ್ಯಾಲಿಯನ್, ಅಸ್ಯೈಗೋಳಿ, ಮಂಗಳೂರು, 15ನೇ ಮಾರ್ಚ್.
2. ಉದಯಕುಮಾರ ಕೆ.(2017), ''ಯೋಗದ ಪ್ರಭಾವ – ವೈಜ್ಞಾನಿಕ ವಿಶ್ಲೇಷಣೆ'', ಪ್ರಚಾರೋಪನ್ಯಾಸ, ಪ್ರಚಾರೋಪನ್ಯಾಸ, ಕುಕ್ಕೆ ಶ್ರೀ. ಸುಬ್ರಹ್ಮಣ್ಯೇಶ್ವರ ಕಾಲೇಜು, ಸುಬ್ರಹ್ಮಣ್ಯ, 21ನೇ ಮಾರ್ಚ್.

ಇ) ಯೋಗ ತರಬೇತಿ ಶಿಬಿರವನ್ನು ಈ ಕೆಳಗಿನ ಸ್ಥಳಗಳಲ್ಲಿ ಆಯೋಜಿಸಲಾಯಿತು

ಕ್ರ. ಸಂ.	ಸ್ಥಳ
1.	ಶ್ರೀ. ಮಹಾಲಿಂಗೇಶ್ವರ ದೇವಸ್ಥಾನ, ಪಡ್ಯಾಣ.
2.	ವಿಶ್ವವಿದ್ಯಾನಿಲಯ ಹಿರಿಯ ಪ್ರಾರ್ಥಮಿಕ ಸ್ಕೂಲ್, ಮಂಗಳಗಂಗೋತ್ರಿ.
3.	ಕೊಜೆಪ್ಪೆ ಕಮ್ಯೂನಿಟಿ ಹಾಲ್, ಬಾಯರ್.
4.	ಕೆ.ಎಸ್.ಆರ್.ಪಿ. 7ನೇ ಬಿ.ಎನ್. ಅಸ್ಯೈಗೋಳಿ, ಮಂಗಳೂರು
5	ಪ್ರಥಮ ದರ್ಜೆ ಕಾಲೇಜು, ಮಂಗಳೂರು ವಿಶ್ವವಿದ್ಯಾನಿಲಯ.
6.	ಶ್ರೀ ಕಾಳಿಕಾಂಬ ದೇವಸ್ಥಾನ, ಕೊಟೆಕಾರ್, ಮಂಗಳೂರು
7.	ಪಿ.ಎ. ಇಂಜಿನಿಯರಿಂಗ ಕಾಲೇಜು, ಮಹಿಳೆಯರ ವಸತಿ ನಿಲಯ, ಮುಡಿಪು
8.	ಲಿಂಕ್ ರೆಹ್ಯಬಿಲಿಟೇಷನ್ ಸೆಂಟರ್, ಬಜಾಲ್, ಮಂಗಳೂರು
9.	ಮಹಿಳೆಯರ ವಸತಿ ನಿಲಯ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ
10.	ಬಿ.ಸಿ.ಎಂ ವಸತಿ ನಿಲಯ, ನಡುಪದವು.
11.	ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ

39. ಡಾ. ಕೆ. ಶಿವರಾಮ ಕಾರಂತ ಪೀಠ

ಸಂಯೋಜಕರು: **ಪ್ರೊ.ಭುವನೇಶ್ವರಿ ಹೆಗಡೆ**

2016–17ರ ಅವಧಿಯಲ್ಲಿ ಕೈಗೊಳ್ಳಲಾದ ಕಾರ್ಯಚಟುವಟಿಕೆಯ ವಿವರ

ಕ್ರ.ಸಂ.	ದಿನಾಂಕ	ಕಾರ್ಯಕ್ರಮದ ವಿವರ	ಭಾಗವಹಿಸಿದ ಅತಿಥಿಗಣ್ಯರು/ಸಂಪನ್ಮೂಲ ವ್ಯಕ್ತಿಗಳು
1	02.03.2016	**ಶಿವರಾಮ ಕಾರಂತರ ಸಾಹಿತ್ಯಾವಲೋಕನ** ಒಂದು ದಿನದ ವಿಚಾರಸಂಕಿರಣ	1. **ಪ್ರೊ.ಎಸ್.ಜಿ.ಸಿದ್ಧರಾಮಯ್ಯ** ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು, ಬೆಂಗಳೂರು

		ಡಾ.ಕೆ.ಶಿವರಾಮ ಕಾರಂತ ಸರಕಾರಿ ಪ್ರಥಮ ದರ್ಜೆ ಕಾಲೇಜು, ಬೆಳ್ಳಾರೆ, ದ.ಕ.	2. **ಪ್ರೊ.ಟಿ.ಡಿ.ಕೆಂಪರಾಜು** ಕುಲಸಚಿವರು, ಮಂಗಳೂರು ವಿಶ್ವವಿದ್ಯಾನಿಲಯ 3. **ಡಾ.ರೇಖಾ ಬನ್ನಾಡಿ** ಕನ್ನಡ ವಿಭಾಗ ಮುಖ್ಯಸ್ಥರು, ಭಂಡಾರ್‌ಕಾರ್ಸ್ ಕಾಲೇಜು, ಕುಂದಾಪುರ 4. **ಡಾ.ಶೈಲಾ ಯು.** ಕನ್ನಡ ವಿಭಾಗ, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು 5. **ಡಾ.ಪೂವಪ್ಪ ಕಣಿಯೂರು** ಕನ್ನಡ ವಿಭಾಗ, ನೆಹರೂ ಸ್ಮಾರಕ ಕಾಲೇಜು, ಸುಳ್ಯ 6. **ಡಾ.ಐವನ್ ಫ್ರಾನ್ಸಿಸ್ ಲೋಬೊ** ಕನ್ನಡ ವಿಭಾಗ, ಸರಕಾರಿ ಪ್ರಥಮ ದರ್ಜೆ ಕಾಲೇಜು, ಬೆಳ್ಳಾರೆ

40. ಡಾ.ಪಿ.ದ0ಯಾನ0ದ ಪೈ ಮತ್ತು ಶ್ರೀ ಪಿ.ಸತೀಶ್ ಪೈ 0ಯಕ್ಷಗಾನ ಅಧ್ಯ0ಯನ ಕೇ0ದ್ರ

ಸಂಯೋಜಕರು : ಡಾ.ಧನಂಜಯ ಕುಂಬ್ಳೆ
ಸಂಶೋಧನಾಧಿಕಾರಿ : ಡಾ.ರಾಜಶ್ರೀ
ಸಂಶೋಧನ ಸಹಾಯಕರು : ಶ್ರೀ ಸತೀಶ್ ಎ.
ಬೆರಳಚ್ಚುಗಾರರು : ಶ್ರೀಮತಿ ಜೆಸ್ಸಿ ಮೇರಿ ಡಿ ಸೋಜ

ಪರಿಪೂರ್ಣ ರಂಗಭೂಮಿಯಾದ ಯಕ್ಷಗಾನದ ಅಧ್ಯಯನ, ಪ್ರಕಟನೆ, ಸಂವರ್ಧನೆ ಮತ್ತು ಸಂರಕ್ಷಣೆಗಾಗಿ ಡಾ. ಪಿ. ದಯಾನಂದ ಪೈ ಮತ್ತು ಶ್ರೀ ಪಿ. ಸತೀಶ್ ಪೈ ಅವರ ಆರ್ಥಿಕ ಅನುದಾನದಿಂದ ಮಂಗಳೂರು ವಿಶ್ವವಿದ್ಯಾನಿಲಯದ ಡಾ. ಪಿ. ದಯಾನಂದ ಪೈ ಮತ್ತು ಶ್ರೀ ಪಿ.ಸತೀಶ್ ಪೈ ಯಕ್ಷಗಾನ ಅಧ್ಯಯನ ಕೇಂದ್ರವು 2009ರಲ್ಲಿ ಅಸ್ತಿತ್ವಕ್ಕೆ ಬಂದಿರುತ್ತದೆ. ಯಕ್ಷಗಾನದ ವಿದ್ವಾಂಸರು, ಕಲಾವಿದರು, ಸಹೃದಯಿ ಪ್ರೇಕ್ಷಕರ ಅನುಸಂಧಾನದ ಮೂಲಕವೇ ಯಕ್ಷಗಾನ ಅಧ್ಯಯನ ಕೇಂದ್ರವನ್ನು ರೂಪಿಸಬೇಕೆಂಬುದು ಯಕ್ಷಗಾನ ಅಧ್ಯಯನ ಕೇಂದ್ರದ ಆಶಯವಾಗಿದೆ. ಯಕ್ಷಗಾನವನ್ನು ತೆಂಕು–ಬಡಗು ಅಥವಾ ಮೂಡಲಪಾಯ–ಪಡುವಲಪಾಯ ಎಂಬ ಸೀಮಿತ ಚೌಕಟ್ಟಿಗೊಳಪಡಿಸದೆ ಯಕ್ಷಗಾನದ ಇತರ ಸಂವಾದಿ ಕಲೆಗಳೂ ಒಳಗೊಳ್ಳುವಂತೆ ಎಲ್ಲವನ್ನೂ ಯಕ್ಷಗಾನದ ವಿಶಾಲ ವ್ಯಾಪ್ತಿಯೊಳಗೆ ತಂದು ಇದರ ಕುರಿತಂತೆ ಅಧ್ಯಯನ ಮತ್ತು ಸಂಗ್ರಹ, ಯಕ್ಷಗಾನಕ್ಕೆ ಸಂಬಂಧಪಟ್ಟ ಪ್ರಚಾರೋಪನ್ಯಾಸಗಳು, ಪ್ರಾತ್ಯಕ್ಷಿಕೆ, ಯಕ್ಷಗಾನ ಪ್ರದರ್ಶನಗಳನ್ನು ಏರ್ಪಡಿಸುವುದು, ವಿಚಾರಸಂಕಿರಣಗಳು, ಕಾರ್ಯಾಗಾರ, ದಾಖಲಾತಿ, ಯಕ್ಷಗಾನದ ಕಲಿಕೆ, ಸಂಶೋಧಕರಿಗೆ, ವಿದ್ಯಾರ್ಥಿಗಳಿಗೆ, ಕಲಾವಿದರಿಗೆ ಮುಖ್ಯ ಆಕರವಾಗಬಲ್ಲ ಸುಸಜ್ಜಿತ ಯಕ್ಷವಾಙ್ಮಯ ಗ್ರಂಥಾಲಯದ ನಿರ್ಮಾಣ, ವ್ಯವಸ್ಥಿತವಾದ ಮತ್ತು ಅನನ್ಯವಾದ ವಸ್ತುಸಂಗ್ರಹಾಲಯದ ನಿರ್ಮಾಣ ಮತ್ತು ಆಡಿಯೋ – ವೀಡಿಯೋ ಸಿಡಿಗಳನ್ನು ಒಳಗೊಂಡ ಆರ್ಕೈವ್ ಮಾದರಿಯ ಸಂಗ್ರಹ, ಸ್ಥಳೀಯ ಕಲಾವಿದರಿಗೆ ಪ್ರೋತ್ಸಾಹ ನೀಡುವ ದೃಷ್ಟಿಯಿಂದ ಯಕ್ಷಗಾನ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಿಕೊಡುವುದು – ಇಂತಹ ಬಹುಮುಖಿ ಉದ್ದೇಶಗಳನ್ನು ಯಕ್ಷಗಾನ ಅಧ್ಯಯನ ಕೇಂದ್ರವು ಹೊಂದಿದೆ. ಈ ನಿಟ್ಟಿನಲ್ಲಿ, ಯಕ್ಷಗಾನ ಅಧ್ಯಯನ ಕೇಂದ್ರವು ಕಾರ್ಯನಿರ್ವಹಿಸುತ್ತಿದೆ.

1. ಯಕ್ಷಗಾನ ತರಬೇತಿ ಮತ್ತು ಪ್ರದರ್ಶನ

1.1 ಉಚಿತ ಯಕ್ಷಗಾನ ತರಬೇತಿ ಮತ್ತು 'ಯಕ್ಷಮಂಗಳ' ತಂಡದಿಂದ ವಿವಿಧೆಡೆ ನಡೆದ ಪ್ರದರ್ಶನ

ವಿದ್ಯಾರ್ಥಿಗಳಲ್ಲಿ ತಮ್ಮ ಶೈಕ್ಷಣಿಕ ಚಟುವಟಿಕೆಗಳೊಂದಿಗೆ ಯಕ್ಷಗಾನ ಕಲೆಯ ಆಸಕ್ತಿಯನ್ನು ಮೂಡಿಸುವ ಉದ್ದೇಶದಿಂದ ಕಳೆದ ಕೆಲವು ವರ್ಷದಿಂದ ಡಾ.ಪಿ.ದಯಾನಂದ ಪೈ ಮತ್ತು ಶ್ರೀ ಪಿ.ಸತೀಶ್ ಪೈ ಯಕ್ಷಗಾನ ಅಧ್ಯಯನ ಕೇಂದ್ರದ ವತಿಯಿಂದ ವಿದ್ಯಾರ್ಥಿಗಳಿಗೆ ಯಕ್ಷಗಾನದ ಹೆಜ್ಜೆಗಾರಿಕೆಯ ಬಗ್ಗೆ ಉಚಿತ ತರಬೇತಿಯನ್ನು ನೀಡಿ, ಪ್ರದರ್ಶನದ ಅವಕಾಶವನ್ನು ಕಲ್ಪಿಸಿಕೊಡಲಾಗುತ್ತಿದೆ. ಆಸಕ್ತ ವಿದ್ಯಾರ್ಥಿಗಳಿಗೆ ಯಕ್ಷಗಾನದ ಹೆಜ್ಜೆ, ನಾಟ್ಯ ಹಾಗೂ ಅಭಿನಯದ ಉಚಿತ ತರಬೇತಿ ನೀಡಿ, ಯಕ್ಷಮಂಗಳ ತಂಡದ ಮೂಲಕ ಯಕ್ಷಗಾನ ಪ್ರದರ್ಶನದ ಅವಕಾಶವನ್ನು ನೀಡಲಾಗುತ್ತಿದೆ.

ಅದರಂತೆ ಡಾ.ಪಿ.ದಯಾನಂದ ಪೈ ಮತ್ತು ಶ್ರೀ ಪಿ.ಸತೀಶ್ ಪೈ ಯಕ್ಷಗಾನ ಅಧ್ಯಯನ ಕೇಂದ್ರದ **ಯಕ್ಷಮಂಗಳ ವಿದ್ಯಾರ್ಥಿ ತಂಡ**ದಿಂದ ಯಕ್ಷಗಾನ ಪ್ರದರ್ಶನವನ್ನು ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿ ಮಾತ್ರವಲ್ಲದೆ, ಇತರೆಡೆಗಳಲ್ಲಿಯೂ ಹೊರಗಿನ ಸಂಘಸಂಸ್ಥೆಗಳ ಸಹಯೋಗದಲ್ಲಿ ಏರ್ಪಡಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ತಂಡದ ಸ್ನಾತಕೋತ್ತರ ವಿದ್ಯಾರ್ಥಿಗಳು ಕೇಂದ್ರದಿಂದ ಯಕ್ಷಗಾನ ತರಬೇತಿ ಪಡೆದು, ಬೆಳ್ತಂಗಡಿ ತಾಲೂಕಿನ ಉಜಿರೆ ಹಾಗೂ ಪುತ್ತೂರು ತಾಲೂಕಿನ ಸವಣೂರಿನಲ್ಲಿ ಯಕ್ಷಗಾನ ಪ್ರದರ್ಶನವನ್ನು ನೀಡುವುದರೊಂದಿಗೆ ವಿಶ್ವವಿದ್ಯಾನಿಲಯದ ಆವರಣದ ಹೊರಗಡೆಯೂ ಯಶಸ್ವೀ ಪ್ರದರ್ಶನವನ್ನು ನೀಡಿದ್ದಾರೆ.

1.1.1 ಸವಣೂರು: 2016ರ ಅಕ್ಟೋಬರ್ ತಿಂಗಳಿನಲ್ಲಿ ಕೇಂದ್ರದ **ಯಕ್ಷಮಂಗಳ** ತಂಡದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಅಲ್ಪಾವಧಿಯ ಯಕ್ಷಗಾನ ತರಬೇತಿ ನೀಡಿ, ಪುತ್ತೂರು ತಾಲೂಕಿನ ಸವಣೂರಿನ ವಿದ್ಯಾರಶ್ಮಿ ಸಮೂಹ ಶಿಕ್ಷಣ ಸಂಸ್ಥೆ, ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಬೇರೆಬೇರೆ ಅಕಾಡೆಮಿಗಳ ಸಹಯೋಗದಲ್ಲಿ ದಿನಾಂಕ: 15.10.2016ರಂದು **ಕಲಾರಶ್ಮಿ** 2016 **– ಕರ್ನಾಟಕ ಜಾನಪದ ಉತ್ಸವ** ಕಾರ್ಯಕ್ರಮದಲ್ಲಿ ಸವಣೂರಿನ ವಿದ್ಯಾರಶ್ಮಿಯಲ್ಲಿ **ಪಾಂಚಜನ್ಯ** ಎಂಬ ಯಕ್ಷಗಾನ ಪ್ರದರ್ಶನವನ್ನು ನೀಡಲಾಗಿದೆ. ಈ ಸಂದರ್ಭದಲ್ಲಿ ಕೇಂದ್ರದ **ಯಕ್ಷಮಂಗಳ** ತಂಡದ ವಿದ್ಯಾರ್ಥಿ ಕಲಾವಿದರನ್ನು ಸಂಘಟಕರು ರಾಜ್ಯಮಟ್ಟದ ಪ್ರಶಸ್ತಿ ಪತ್ರ ನೀಡಿ ಗೌರವಿಸಿದ್ದಾರೆ. ಈ ಪ್ರದರ್ಶನದ ನಿರ್ದೇಶಕರಾಗಿ ಸದಾಶಿವ ಶೆಟ್ಟಿಗಾರ್ ಕಿನ್ನಿಗೋಳಿ ಹಾಗೂ ಸಹನಿರ್ದೇಶಕರಾಗಿ ದೀವಿತ್ ಕೋಟ್ಯಾನ್ ಸಹಕರಿಸಿದ್ದಾರೆ.

1.1.2 ಉಜಿರೆ: ಕೇಂದ್ರದ **ಯಕ್ಷಮಂಗಳ** ತಂಡದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಅಲ್ಪಾವಧಿಯ ಯಕ್ಷಗಾನ ತರಬೇತಿ ನೀಡಿ, ದಿನಾಂಕ: 08.01.2017ರಂದು ವಿವಿಧ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಉಜಿರೆಯ ಶ್ರೀ ಸದಾಶಿವ ದೇವಸ್ಥಾನದಲ್ಲಿ **ಪಾಂಚಜನ್ಯ** ಯಕ್ಷಗಾನ ಪ್ರದರ್ಶನವನ್ನು ನೀಡಲಾಯಿತು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು. ಈ ಪ್ರದರ್ಶನದ ನಿರ್ದೇಶಕರಾಗಿ ಶ್ರೀ ಸದಾಶಿವ ಶೆಟ್ಟಿಗಾರ್ ಹಾಗೂ ಸಹನಿರ್ದೇಶಕರಾಗಿ ದೀವಿತ್ ಕೋಟ್ಯಾನ್ ಸಹಕರಿಸಿದ್ದಾರೆ.

1.2 ಶಿಕ್ಷಕೇತರ ಸಿಬ್ಬಂದಿಗಳಿಗೆ ಉಚಿತ ತರಬೇತಿ

ಪ್ರಸ್ತುತ ವರ್ಷದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಆಸಕ್ತ ಶಿಕ್ಷಕೇತರ ಉದ್ಯೋಗಿಗಳಿಗೆ ಕೇಂದ್ರದ 'ಯಕ್ಷಮಂಗಳ' ತಂಡದ ವಿದ್ಯಾರ್ಥಿಗಳಿಂದ ಉಚಿತ ಯಕ್ಷಗಾನ ತರಬೇತಿಯನ್ನು ನೀಡಲಾಗುತ್ತಿದೆ.

2. ತಂಡದ ಚಟುವಟಿಕಾ ದಿನ

ಮಂಗಳೂರು ವಿಶ್ವವಿದ್ಯಾನಿಲಯದ ಯಕ್ಷಗಾನ ಅಧ್ಯಯನ ಕೇಂದ್ರದ ಯಕ್ಷಮಂಗಳ ತಂಡದ ವಿದ್ಯಾರ್ಥಿಗಳಿಗೆ ಪ್ರದರ್ಶನದ ಅವಧಿಯಲ್ಲಿ ಸುಮಾರು ಒಂದು ತಿಂಗಳ ಕಾಲ ಹೆಜ್ಜೆಗಾರಿಕೆ, ಕುಣಿತ, ಅಭಿನಯ, ಮಾತು ಇತ್ಯಾದಿ ವಿಷಯಗಳಲ್ಲಿ ಉಚಿತ ತರಬೇತಿಯನ್ನು ಕೇಂದ್ರದಲ್ಲಿ ನೀಡಲಾಗುತ್ತಿದೆ. ಪ್ರಸ್ತುತ ವರ್ಷದಲ್ಲಿ ತರಬೇತಿಯನ್ನು ಪ್ರದರ್ಶನದ ಅವಧಿಯಲ್ಲಿ ನೀಡುವುದರೊಂದಿಗೆ ವಾರದಲ್ಲಿ ಒಂದು ದಿನ ಯಕ್ಷಗಾನ ಕಲಿಕೆಗೆ ಪೂರಕವಾಗಿ ಯಕ್ಷಗಾನದ ಚಟುವಟಿಕೆಯಲ್ಲಿ ಭಾಗವಹಿಸುವ ಅವಕಾಶವನ್ನು ವಿದ್ಯಾರ್ಥಿಗಳಿಗೆ ಕಲ್ಪಿಸಲಾಗಿದೆ. ಪ್ರತೀ ಶುಕ್ರವಾರದಂದು ಸಂಜೆ 4 ರಿಂದ 6 ಗಂಟೆಯವರೆಗೆ ನಡೆಯುವ ಈ ತರಬೇತಿಯಲ್ಲಿ ಆಸಕ್ತ ಸ್ನಾತಕೋತ್ತರ ವಿದ್ಯಾರ್ಥಿಗಳು ಕೂಡಾ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ.

3. ಅಷ್ಟಾವಧಾನ ಕಾರ್ಯಕ್ರಮ

ಮಂಗಳೂರು ವಿಶ್ವವಿದ್ಯಾನಿಲಯದ ಡಾ.ಪಿ.ದಯಾನಂದ ಪೈ ಮತ್ತು ಶ್ರೀ ಪಿ.ಸತೀಶ್ ಪೈ ಯಕ್ಷಗಾನ ಅಧ್ಯಯನ ಕೇಂದ್ರದ ಆಶ್ರಯದಲ್ಲಿ 24.09.2016ರಂದು ಮಂಗಳೂರು ವಿಶ್ವವಿದ್ಯಾನಿಲಯ ಕಾಲೇಜಿನ ರವೀಂದ್ರ ಕಲಾಭವನದಲ್ಲಿ ಶತಾವಧಾನಿ ಡಾ.ಆರ್.ಗಣೇಶ್ ಅವರ ನೇತೃತ್ವದಲ್ಲಿ **ಅಷ್ಟಾವಧಾನ** ಕಾರ್ಯಕ್ರಮವನ್ನು ಏರ್ಪಡಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಪೃಚ್ಛಕರಾಗಿ ಡಾ.ಪಾದೇಕಲ್ಲು ವಿಷ್ಣುಭಟ್(ನಿಷೇಧಾಕ್ಷರಿ), ವಿದ್ವಾನ್ ಶ್ರೀ ಮಹೇಶ ಭಟ್ಟ ಆರ್. ಹಾರ್ಯಾಡಿ(ಸಮಸ್ಯಾಪೂರಣ), ಪ್ರೊ.ಬಾಲಕೃಷ್ಣ ಭಾರದ್ವಾಜ(ದತ್ತಪದಿ), ಡಾ.ಶ್ರೀಧರ ಡಿ.ಎಸ್.(ನ್ಯಸ್ತಾಕ್ಷರಿ), ಡಾ.ರಾಘವ ನಂಬಿಯಾರ್(ಆಶುಕವಿತ್ವ), ಶ್ರೀ ತಾರಾನಾಥ ವರ್ಕಾಡಿ (ಅಪ್ರಸ್ತುತ ಪ್ರಸಂಗ), ಶ್ರೀ ಚಂದ್ರಶೇಖರ ಕೆದಿಲಾಯ ಎಚ್.(ಕಾವ್ಯವಾಚನ),

ಶ್ರೀ ಗಣೇಶ ಪಿ. (ಸಂಖ್ಯಾಬಂಧ) ಮೊದಲಾದ ಕಲಾವಿದರು ಭಾಗವಹಿಸಿದ್ದರು. ಮಂಗಳೂರು ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳಾದ ಪ್ರೊ.ಕೆ.ಭೈರಪ್ಪ ಇವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಸಿಂಡಿಕೇಟ್ ಸದಸ್ಯರಾದ ಕೆ. ಪ್ರಸನ್ನ ಕುಮಾರ್ ರೈ, ಕೇಂದ್ರದ ಸಂಯೋಜಕರಾದ ಡಾ. ಧನಂಜಯ ಕುಂಬ್ಳೆ ಉಪಸ್ಥಿತರಿದ್ದರು.

4.1 ಮಿಜಾರು ನೆನಪು ಕಾರ್ಯಕ್ರಮ

ಯಕ್ಷಗಾನ ರಂಗದಲ್ಲಿ ಸುದೀರ್ಘಕಾಲ ಸೇವೆ ಸಲ್ಲಿಸಿ ನಿಧನರಾದ ತೆಂಕುತಿಟ್ಟಿನ ಪ್ರಸಿದ್ಧ ಹಾಸ್ಯ ಕಲಾವಿದರಾದ ಮಿಜಾರು ಅಣ್ಣಪ್ಪ ಅವರ ನಿಧನದ ಸಂದರ್ಭದಲ್ಲಿ ದಿನಾಂಕ: 09.04.2016ರಂದು ಮಂಗಳೂರು ವಿಶ್ವವಿದ್ಯಾನಿಲಯದ ಯಕ್ಷಗಾನ ಅಧ್ಯಯನ ಕೇಂದ್ರದಲ್ಲಿ **ಮಿಜಾರು ನೆನಪು** ಶ್ರದ್ಧಾಂಜಲಿ ಕಾರ್ಯಕ್ರಮ ನಡೆಯಿತು.

ಯಕ್ಷಗಾನ ಅಧ್ಯಯನ ಕೇಂದ್ರದ ಸಂಯೋಜಕ ಡಾ.ಧನಂಜಯ ಕುಂಬ್ಳೆ, ಯಕ್ಷಗಾನ ಅಧ್ಯಯನ ಕೇಂದ್ರ ಸಂಶೋಧನ ಅಧಿಕಾರಿ ಡಾ.ರಾಜಶ್ರೀ, ಸಂಶೋಧನ ಸಹಾಯಕ ಶ್ರೀ ಸತೀಶ್ ಕೊಣಾಜೆ, ಯುವ ಯಕ್ಷಗಾನ ಕಲಾವಿದ ದೀವಿತ್ ಶ್ರೀಧರ್ ಕೋಟ್ಯಾನ್, ಭಾಗವತರಾದ ಶ್ರೀನಿವಾಸ ಬಳ್ಳಮಂಜ ಮತ್ತು ಯಕ್ಷಗಾನ ಅಧ್ಯಯನ ಕೇಂದ್ರದ **ಯಕ್ಷಮಂಗಳ** ತಂಡದ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

4.2 ಗೇರುಕಟ್ಟೆ ನೆನಪು ಕಾರ್ಯಕ್ರಮ

ಯಕ್ಷಗಾನ ರಂಗದಲ್ಲಿ ಸುದೀರ್ಘಕಾಲ ಸೇವೆ ಸಲ್ಲಿಸಿ ನಿಧನರಾದ ತೆಂಕುತಿಟ್ಟಿನ ಪ್ರಸಿದ್ಧ ಬಣ್ಣದ ವೇಷಧಾರಿಯಾದ ಗೇರುಕಟ್ಟೆ ಗಂಗಯ್ಯ ಶೆಟ್ಟಿ ಅವರ ನಿಧನದ ಸಂದರ್ಭದಲ್ಲಿ ದಿನಾಂಕ: 24.03.2017ರಂದು ಮಂಗಳೂರು ವಿಶ್ವವಿದ್ಯಾನಿಲಯದ ಯಕ್ಷಗಾನ ಅಧ್ಯಯನ ಕೇಂದ್ರದಲ್ಲಿ **ಗೇರುಕಟ್ಟೆ ಗಂಗಯ್ಯ ಶೆಟ್ಟಿ ನೆನಪು** ಶ್ರದ್ಧಾಂಜಲಿ ಕಾರ್ಯಕ್ರಮ ನಡೆಯಿತು.

ಯಕ್ಷಗಾನ ಅಧ್ಯಯನ ಕೇಂದ್ರದ ಸಂಯೋಜಕ ಡಾ.ಧನಂಜಯ ಕುಂಬ್ಳೆ, ಯಕ್ಷಗಾನ ಅಧ್ಯಯನ ಕೇಂದ್ರ ಸಂಶೋಧನ ಅಧಿಕಾರಿ ಡಾ.ರಾಜಶ್ರೀ, ಸಂಶೋಧನ ಸಹಾಯಕ ಶ್ರೀ ಸತೀಶ್ ಕೊಣಾಜೆ ಮತ್ತು ಯಕ್ಷಗಾನ ಅಧ್ಯಯನ ಕೇಂದ್ರದ **ಯಕ್ಷಮಂಗಳ** ತಂಡದ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

5. ಯಕ್ಷಮಂಗಳ ಪ್ರಚಾರೋಪನ್ಯಾಸ

ಮಂಗಳೂರು ವಿಶ್ವವಿದ್ಯಾನಿಲಯದ ಡಾ.ಪಿ.ದಯಾನಂದ ಪೈ ಮತ್ತು ಶ್ರೀ ಪಿ.ಸತೀಶ್ ಪೈ ಯಕ್ಷಗಾನ ಅಧ್ಯಯನ ಕೇಂದ್ರದ 2016–17ನೇ ಸಾಲಿನ **ಯಕ್ಷಮಂಗಳ ಪ್ರಚಾರೋಪನ್ಯಾಸ** ಕಾರ್ಯಕ್ರಮವು ಮಂಗಳೂರು ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳ ಸಹಯೋಗದಲ್ಲಿ ಯಶಸ್ವಿಯಾಗಿ ನಡೆದಿದೆ. ಪ್ರಚಾರೋಪನ್ಯಾಸದಲ್ಲಿ ಯಕ್ಷಗಾನ ಕ್ಷೇತ್ರದ ಹಿರಿಯ ಕಲಾವಿದರು ಹಾಗೂ ತಜ್ಞರಿಂದ ವಿಶೇಷ ಉಪನ್ಯಾಸಗಳನ್ನು ಏರ್ಪಡಿಸಲಾಗಿದೆ. ವಿವರಗಳು ಈ ಕೆಳಗಿನಂತಿವೆ.

5.1 ದಿನಾಂಕ: 05.04.2016ರಂದು ಕೊಡಿಯಾಲಬೈಲಿನ ಶಾರದಾ ಕಾಲೇಜಿನಲ್ಲಿ ಕೇಂದ್ರವು ಏರ್ಪಡಿಸಿದ ಯಕ್ಷಮಂಗಳ ಪ್ರಚಾರೋಪನ್ಯಾಸ ಮಾಲಿಕೆಯಲ್ಲಿ ತಜ್ಞ ಸಂಪನ್ಮೂಲವ್ಯಕ್ತಿ **ಶ್ರೀ ಜಬ್ಬಾರ್ ಸಮೋ** (ಪ್ರಸಿದ್ಧ ಯಕ್ಷಗಾನ ಅರ್ಥಧಾರಿ) ಅವರಿಂದ **ತಾಳಮದ್ದಳೆ – ಅರ್ಥಗಾರಿಕೆ** ಎಂಬ ವಿಷಯದ ಬಗ್ಗೆ ವಿಶೇಷ ಉಪನ್ಯಾಸವನ್ನು ನಡೆಸಲಾಯಿತು.

ಕಾರ್ಯಕ್ರಮದಲ್ಲಿ ಯಕ್ಷಗಾನ ಅಧ್ಯಯನ ಕೇಂದ್ರದ ಸಂಯೋಜಕ ಡಾ.ಧನಂಜಯ ಕುಂಬ್ಳೆ ಅವರು ಕೇಂದ್ರದ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು. ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಡಾ.ಶ್ರೀಪತಿ ರಾವ್, ಯಕ್ಷಗಾನ ಅಧ್ಯಯನ ಕೇಂದ್ರದ ಸಂಶೋಧನ ಸಹಾಯಕ ಶ್ರೀ ಸತೀಶ್ ಕೊಣಾಜೆ, ಶಾರದಾ ಕಾಲೇಜಿನ ಉಪಪ್ರಾಂಶುಪಾಲ ಶ್ರೀ ಮಾಧವ ಕೆ. ಉಪಸ್ಥಿತರಿದ್ದರು.

5.2 ದಿನಾಂಕ: 05.04.2016ರಂದು ಮುಡಿಪು ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕೇಂದ್ರವು ಏರ್ಪಡಿಸಿದ ಯಕ್ಷಮಂಗಳ ಪ್ರಚಾರೋಪನ್ಯಾಸ ಮಾಲಿಕೆಯಲ್ಲಿ ತಜ್ಞ ಸಂಪನ್ಮೂಲವ್ಯಕ್ತಿ **ಅಶೋಕ್ ಶೆಟ್ಟಿ ಸರಪಾಡಿ** (ಪ್ರಸಿದ್ಧ ಯಕ್ಷಗಾನ ಕಲಾವಿದ) ಅವರಿಂದ **ತುಳು ಯಕ್ಷಗಾನ : ಸಾಧ್ಯತೆ ಮತ್ತು ಸವಾಲುಗಳು** ಎಂಬ ವಿಷಯದ ಬಗ್ಗೆ ವಿಶೇಷ ಉಪನ್ಯಾಸವನ್ನು ನಡೆಸಲಾಯಿತು.

ಕಾರ್ಯಕ್ರಮದಲ್ಲಿ ಯಕ್ಷಗಾನ ಅಧ್ಯಯನ ಕೇಂದ್ರದ ಸಂಯೋಜಕರಾದ ಡಾ.ಧನಂಜಯ ಕುಂಬ್ಳೆ ಅವರು ಕೇಂದ್ರದ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮುಡಿಪು ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ.ಗಿರಿಧರ ರಾವ್ ಎಂ.ಎಸ್. ಅವರು ವಹಿಸಿದ್ದರು. ಯಕ್ಷಗಾನ ಅಧ್ಯಯನ ಕೇಂದ್ರದ ಸತೀಶ್ ಕೊಣಾಜೆ ಉಪಸ್ಥಿತರಿದ್ದರು. ಪ್ರಾಧ್ಯಾಪಕ ಡಾ.ಶ್ರೀಧರ ಮಣಿಯಾಣಿ ಸ್ವಾಗತಿಸಿ ಅತಿಥಿಗಳ ಪರಿಚಯ ಮಾಡಿದರು. ಪ್ರಾಧ್ಯಾಪಕ ಶ್ರೀ ನಂದಕಿಶೋರ್ ವಂದಿಸಿದರು. ವಿದ್ಯಾರ್ಥಿನಿ ಮಿಥುಶ್ರೀ ಕಾರ್ಯಕ್ರಮ ನಿರೂಪಿಸಿದರು. ಅಶ್ವಿನಿ ಪ್ರಾರ್ಥಿಸಿದರು.

5.3 ದಿನಾಂಕ: 22.04.2016ರಂದು ಸವಣೂರಿನ ಶ್ರೀ ವಿದ್ಯಾರಶ್ಮಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕೇಂದ್ರವು ಏರ್ಪಡಿಸಿದ ಯಕ್ಷಮಂಗಳ ಪ್ರಚಾರೋಪನ್ಯಾಸ ಮಾಲಿಕೆಯಲ್ಲಿ ತಜ್ಞ ಸಂಪನ್ಮೂಲವ್ಯಕ್ತಿ **ಡಾ.ಕಮಲಾಕ್ಷ ಕೆ.** ಪ್ರಾಂಶುಪಾಲರು ನಾಲಂದಾ ಕಾಲೇಜು, ಪೆರ್ಲ ಅವರಿಂದ **ಯಕ್ಷಗಾನ ವಾಚಿಕ : ಸ್ವರೂಪ ಮತ್ತು ವೈಶಿಷ್ಟ್ಯ** ಎಂಬ ವಿಷಯದ ಬಗ್ಗೆ ವಿಶೇಷ ಉಪನ್ಯಾಸವನ್ನು ನಡೆಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲ ಶ್ರೀ ಶೇಷಗಿರಿ ಎಂ. ಅವರು ವಹಿಸಿದರು. ಯಕ್ಷಗಾನ ಅಧ್ಯಯನ ಕೇಂದ್ರ ಸಂಶೋಧನ ಅಧಿಕಾರಿ ಡಾ.ರಾಜಶ್ರೀ ಅವರು ಕೇಂದ್ರದ ಕಾರ್ಯಯೋಜನೆಯ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು. ವಿದ್ಯಾರಶ್ಮಿ ಸಮೂಹ ಶಿಕ್ಷಣ ಸಂಸ್ಥೆಗಳ ಆಡಳಿತಾಧಿಕಾರಿ ಆಶ್ವಿನ್ ಎಲ್. ಶೆಟ್ಟಿ ಉಪಸ್ಥಿತರಿದ್ದರು.

5.4 ದಿನಾಂಕ: 22.04.2016ರಂದು ದರ್ಬೆಯ ಸಂತ ಫಿಲೋಮಿನಾ ಕಾಲೇಜಿನಲ್ಲಿ ಕೇಂದ್ರವು ಏರ್ಪಡಿಸಿದ ಯಕ್ಷಮಂಗಳ ಪ್ರಚಾರೋಪನ್ಯಾಸ ಮಾಲಿಕೆಯಲ್ಲಿ ತಜ್ಞ ಸಂಪನ್ಮೂಲವ್ಯಕ್ತಿ **ಶ್ರೀ ಭಾಸ್ಕರ ರೈ ಕುಕ್ಕುವಳ್ಳಿ** ಉಪನ್ಯಾಸಕರು, ಸರಕಾರಿ ಪದವಿಪೂರ್ವ ಕಾಲೇಜು, ಗುರುಪುರ ಅವರಿಂದ **ಯಕ್ಷಗಾನ : ಪರಂಪರೆ ಮತ್ತು ಪ್ರಯೋಗ** ಎಂಬ ವಿಷಯದ ಬಗ್ಗೆ ವಿಶೇಷ ಉಪನ್ಯಾಸವನ್ನು ನಡೆಸಲಾಯಿತು.

ಯಕ್ಷಗಾನ ಅಧ್ಯಯನ ಕೇಂದ್ರ ಸಂಶೋಧನ ಅಧಿಕಾರಿ ಡಾ.ರಾಜಶ್ರೀ ಅವರು ಕೇಂದ್ರದ ಕಾರ್ಯಯೋಜನೆಯ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು. ಅಧ್ಯಕ್ಷತೆಯನ್ನು ಕಾಲೇಜಿನ ಉಪ ಪ್ರಾಂಶುಪಾಲ ಪ್ರೊ.ವಿಷ್ಣು ಭಟ್ ಇವರು ವಹಿಸಿದ್ದರು.

5.5 ದಿನಾಂಕ: 09.02.2017ರಂದು ಬಾರ್ಕೂರಿನ ಶ್ರೀಮತಿ ರುಕ್ಮಿಣಿ ಶೆಡ್ತಿ ಸ್ಮಾರಕ ನ್ಯಾಶನಲ್ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕೇಂದ್ರವು ಏರ್ಪಡಿಸಿದ ಯಕ್ಷಮಂಗಳ ಪ್ರಚಾರೋಪನ್ಯಾಸ ಮಾಲಿಕೆಯಲ್ಲಿ ತಜ್ಞ ಸಂಪನ್ಮೂಲ ವ್ಯಕ್ತಿಗಳಾದ **ಪ್ರೊ.ನಾರಾಯಣ ಎಂ.ಹೆಗಡೆ,** ನಿವೃತ್ತ ಪ್ರಾಧ್ಯಾಪಕರು ಅವರಿಂದ **ಯಕ್ಷಗಾನದಲ್ಲಿ ವಾಚಿಕ** ಎಂಬ ವಿಷಯದ ಬಗ್ಗೆ ವಿಶೇಷ ಉಪನ್ಯಾಸವನ್ನು ನಡೆಸಲಾಯಿತು.

ಯಕ್ಷಗಾನ ಅಧ್ಯಯನ ಕೇಂದ್ರದ ಸಂಶೋಧನ ಅಧಿಕಾರಿ ಡಾ.ರಾಜಶ್ರೀ ಅವರು ಕೇಂದ್ರದ ಕಾರ್ಯಯೋಜನೆಯ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು. ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲ ಪ್ರೊ.ಕೆ.ವಸಂತರಾಜ್ ಶೆಟ್ಟಿ ಇವರು ವಹಿಸಿದ್ದರು.

5.6 ದಿನಾಂಕ: 09.02.2017ರಂದು ಕಲ್ಯಾಣಪುರದ ಮಿಲಾಗ್ರಿಸ್ ಕಾಲೇಜಿನಲ್ಲಿ ಕೇಂದ್ರವು ಏರ್ಪಡಿಸಿದ ಯಕ್ಷಮಂಗಳ ಪ್ರಚಾರೋಪನ್ಯಾಸ ಮಾಲಿಕೆಯಲ್ಲಿ ತಜ್ಞ ಸಂಪನ್ಮೂಲವ್ಯಕ್ತಿಗಳಾದ **ಶ್ರೀ ಎಚ್.ಸುಜಯೀಂದ್ರ ಹಂದೆ,** ಕನ್ನಡ ಉಪನ್ಯಾಸಕರು, ಸರಸ್ವತೀ ವಿದ್ಯಾಲಯ, ಗಂಗೊಳ್ಳಿ ಇವರಿಂದ **ಯಕ್ಷಗಾನದಲ್ಲಿ ಹಸ್ತಾಭಿನಯ** ಎಂಬ ವಿಷಯದ ಬಗ್ಗೆ ವಿಶೇಷ ಉಪನ್ಯಾಸವನ್ನು ನಡೆಸಲಾಯಿತು.

ಪ್ರಚಾರೋಪನ್ಯಾಸದಲ್ಲಿ ಮಾತನಾಡಿದ ಅವರು, ಯಕ್ಷಗಾನದಲ್ಲಿ ಬಳಸಲಾಗುವ ಪತಾಕ ಹಸ್ತ, ಅರ್ಥಪತಾಕ, ಸೂಚಿ ಹಸ್ತ, ಶಿಖರ ಹಸ್ತ, ಸರ್ಪಾ ಹಸ್ತ, ಮುಷ್ಠಿ ಹಸ್ತ, ಚಕ್ರಹಸ್ತ, ಮುಕುಳ ಹಸ್ತ, ಚತುರ ಹಸ್ತ ಇತ್ಯಾದಿ ಹಲವು ಪ್ರಕಾರಗಳನ್ನು ಸ್ವತಃ ಹಸ್ತಾಭಿನಯದ ಪ್ರಾತ್ಯಕ್ಷಿಕೆಯ ಮೂಲಕ ತಿಳಿಸಿದರು. ಪ್ರಾತ್ಯಕ್ಷಿಕೆಯಲ್ಲಿ ಭಾಗವತರಾಗಿ ದೇವರಾಜ್ ದಾಸ್ ಮರವಂತೆ, ಮದ್ದಳೆಯಲ್ಲಿ ಮಾಧವ ಮಣೂರು, ಚೆಂಡೆಯಲ್ಲಿ ನವೀನ್ ಕೋಟ ಸಹಕರಿಸಿದರು. ಉಪನ್ಯಾಸಕ ಅಂಪಾರು ನಿತ್ಯಾನಂದ ಶೆಟ್ಟಿ ವಂದಿಸಿ, ಯಶೋಧ ನಿರೂಪಿಸಿದರು.

ಯಕ್ಷಗಾನ ಅಧ್ಯಯನ ಕೇಂದ್ರದ ಸಂಶೋಧನ ಅಧಿಕಾರಿ ಡಾ.ರಾಜಶ್ರೀ ಅವರು ಕೇಂದ್ರದ ಕಾರ್ಯಯೋಜನೆಯ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು. ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲ ಡಾ.ಜೆರಾಲ್ಡ್ ಪಿಂಟೋ ಅವರು ವಹಿಸಿದ್ದರು. ಪ್ರಾಧ್ಯಾಪಕಿ ಶ್ರೀಮತಿ ಹರಿಣಾಕ್ಷಿ ಅತಿಥಿಗಳನ್ನು ಸ್ವಾಗತಿಸಿದರು.

5.7 ದಿನಾಂಕ: 10.02.2017ರಂದು ಮಂಗಳೂರಿನ ಎಸ್.ಡಿ.ಎಂ.ಕಾನೂನು ಕಾಲೇಜು ಹಾಗೂ ಸ್ನಾತಕೋತ್ತರ ಅಧ್ಯಯನ ಸಂಸ್ಥೆಯಲ್ಲಿ ಕೇಂದ್ರವು ಏರ್ಪಡಿಸಿದ ಯಕ್ಷಮಂಗಳ ಪ್ರಚಾರೋಪನ್ಯಾಸ ಮಾಲಿಕೆಯಲ್ಲಿ ತಜ್ಞ ಸಂಪನ್ಮೂಲವ್ಯಕ್ತಿಗಳಾದ **ಡಾ.ಯೋಗೀಶ್ ಕೈರೋಡಿ,** ಕನ್ನಡ ಉಪನ್ಯಾಸಕರು, ಆಳ್ವಾಸ್ ಕಾಲೇಜು, ಮೂಡಬಿದಿರೆ ಇವರಿಂದ **ತೆಂಕುತಿಟ್ಟು ಯಕ್ಷಗಾನದಲ್ಲಿ ಚಲನಶೀಲತೆ** ಎಂಬ ವಿಷಯದ ಬಗ್ಗೆ ವಿಶೇಷ ಉಪನ್ಯಾಸವನ್ನು ನಡೆಸಲಾಯಿತು.

ಯಕ್ಷಗಾನ ಅಧ್ಯಯನ ಕೇಂದ್ರದ ಸಂಯೋಜಕ ಡಾ.ಧನಂಜಯ ಕುಂಬ್ಳೆ ಅವರು ಕೇಂದ್ರದ ಕಾರ್ಯಯೋಜನೆಯ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು. ಕೇಂದ್ರದ ಸಂಶೋಧನ ಅಧಿಕಾರಿ ಡಾ.ರಾಜಶ್ರೀ, ಎಸ್‌ಡಿಎಂ ಕಾಲೇಜಿನ ಪ್ರಾಧ್ಯಾಪಕ ಡಾ.ಸಾಯಿನಾಥ ಮಲ್ಲಿಗೆಮಾಡು ಉಪಸ್ಥಿತರಿದ್ದರು. ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲ ಡಾ.ತಾರಾನಾಥ ಅವರು ವಹಿಸಿದ್ದರು.

5.8 ದಿನಾಂಕ: 13.02.2017ರಂದು ಮಂಜೇಶ್ವರದ ಗೋವಿಂದ ಪೈ ಸ್ಮಾರಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಕೇಂದ್ರವು ಏರ್ಪಡಿಸಿದ ಯಕ್ಷಮಂಗಳ ಪ್ರಚಾರೋಪನ್ಯಾಸ ಮಾಲಿಕೆಯಲ್ಲಿ ತಜ್ಞ ಸಂಪನ್ಮೂಲವ್ಯಕ್ತಿಗಳಾದ **ಶ್ರೀ ಟಿ.ಎ.ಎನ್.ಖಂಡಿಗೆ,** ಕನ್ನಡ ಉಪನ್ಯಾಸಕರು, ಆಳ್ವಾಸ್ ಕಾಲೇಜು, ಮೂಡಬಿದಿರೆ ಇವರಿಂದ **ತಾಳಮದ್ದಲೆಯ ನಿರ್ಮಿತಿ** ಎಂಬ ವಿಷಯದ ಬಗ್ಗೆ ವಿಶೇಷ ಉಪನ್ಯಾಸವನ್ನು ನಡೆಸಲಾಯಿತು.

ಯಕ್ಷಗಾನ ಅಧ್ಯಯನ ಕೇಂದ್ರದ ಸಂಯೋಜಕ ಡಾ.ಧನಂಜಯ ಕುಂಬ್ಳೆ ಅವರು ಕೇಂದ್ರದ ಕಾರ್ಯಯೋಜನೆಯ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು. ಸಮಾರಂಭದ ಅಧ್ಯಕ್ಷತೆಯನ್ನು ಮಂಜೇಶ್ವರ ಗೋವಿಂದ ಪೈ ಸ್ಮಾರಕ ಕಾಲೇಜಿನ

ಪ್ರಾಂಶುಪಾಲರಾದ ಪ್ರೊ.ಸಾಜನ್ ಅವರು ವಹಿಸಿದ್ದರು. ಕೇಂದ್ರದ ಸಂಶೋಧನ ಸಹಾಯಕ ಶ್ರೀ ಸತೀಶ್ ಕೊಣಾಜೆ ಅವರು ಉಪಸ್ಥಿತರಿದ್ದರು.

5.9 ದಿನಾಂಕ: 13.02.2017ರಂದು ಕಾಸರಗೋಡಿನ ಸರಕಾರಿ ಕಾಲೇಜಿನ ಯಕ್ಷಗಾನ ಸಂಶೋಧನ ಕೇಂದ್ರದಲ್ಲಿ ಕೇಂದ್ರವು ಏರ್ಪಡಿಸಿದ ಯಕ್ಷಮಂಗಳ ಪ್ರಚಾರೋಪನ್ಯಾಸ ಮಾಲಿಕೆಯಲ್ಲಿ ತಜ್ಞ ಸಂಪನ್ಮೂಲವ್ಯಕ್ತಿಗಳಾದ **ಡಾ.ಮಾಧವ ಎಂ.ಕೆ.,** ಸಹಾಯಕ ಪ್ರಾಧ್ಯಾಪಕರು, ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿ ಇವರಿಂದ **ಯಕ್ಷಗಾನದಲ್ಲಿ ತುಳು ವೀರರು** ಎಂಬ ವಿಷಯದ ಬಗ್ಗೆ ವಿಶೇಷ ಉಪನ್ಯಾಸವನ್ನು ನಡೆಸಲಾಯಿತು.

ಯಕ್ಷಗಾನ ಅಧ್ಯಯನ ಕೇಂದ್ರದ ಸಂಯೋಜಕ ಡಾ.ಧನಂಜಯ ಕುಂಬ್ಳೆ ಅವರು ಕೇಂದ್ರದ ಕಾರ್ಯಯೋಜನೆಯ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು. ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಡಾ.ಸಿ.ಬಾಬುರಾಜ್ ಅವರು ವಹಿಸಿದ್ದರು. ಕೇಂದ್ರದ ಸಂಶೋಧನ ಸಹಾಯಕ ಶ್ರೀ ಸತೀಶ್ ಕೊಣಾಜೆ ಅವರು ಉಪಸ್ಥಿತರಿದ್ದರು.

5.10 ದಿನಾಂಕ: 15.02.2017ರಂದು ವಿಟ್ಲದ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕೇಂದ್ರವು ಏರ್ಪಡಿಸಿದ ಯಕ್ಷಮಂಗಳ ಪ್ರಚಾರೋಪನ್ಯಾಸ ಮಾಲಿಕೆಯಲ್ಲಿ ತಜ್ಞ ಸಂಪನ್ಮೂಲವ್ಯಕ್ತಿಗಳಾದ **ಪ್ರೊ.ಶ್ರೀಪತಿ ಕಲ್ಲೂರಾಯ,** ಹಣಕಾಸಿನ ಅಧಿಕಾರಿಗಳು, ಮಂಗಳೂರು ವಿಶ್ವವಿದ್ಯಾನಿಲಯ ಇವರಿಂದ **ಯಕ್ಷಗಾನ : ಅಂದು–ಇಂದು** ಎಂಬ ವಿಷಯದ ಬಗ್ಗೆ ವಿಶೇಷ ಉಪನ್ಯಾಸವನ್ನು ನಡೆಸಲಾಯಿತು.

ಸಮಾರಂಭದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲ ಡಾ.ಶಂಕರ ಪಾಟಾಳಿ ಅವರು ವಹಿಸಿದರು. ಯಕ್ಷಗಾನ ಅಧ್ಯಯನ ಕೇಂದ್ರದ ಸಂಯೋಜಕ ಡಾ.ಧನಂಜಯ ಕುಂಬ್ಳೆ ಅವರು ಕೇಂದ್ರದ ಕಾರ್ಯಯೋಜನೆಯ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ಉಪನ್ಯಾಸಕರಾದ ಶ್ರೀಮತಿ ವಿದ್ಯಾ ಸರಸ್ವತಿ, ಪ್ರಣಮ್ಯ ಹಾಗೂ ಕೇಂದ್ರದ ಸಂಶೋಧನ ಸಹಾಯಕ ಶ್ರೀ ಸತೀಶ್ ಕೊಣಾಜೆ ಅವರು ಉಪಸ್ಥಿತರಿದ್ದರು.

5.11 ದಿನಾಂಕ: 15.02.2017ರಂದು ಸಿದ್ದಕಟ್ಟೆಯ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕೇಂದ್ರವು ಏರ್ಪಡಿಸಿದ ಯಕ್ಷಮಂಗಳ ಪ್ರಚಾರೋಪನ್ಯಾಸ ಮಾಲಿಕೆಯಲ್ಲಿ ತಜ್ಞ ಸಂಪನ್ಮೂಲವ್ಯಕ್ತಿಗಳಾದ **ಶ್ರೀ ಸದಾಶಿವ ಶೆಟ್ಟಿಗಾರ್,** ಯಕ್ಷಗಾನ ಕಲಾವಿದ ಮತ್ತು ಯಕ್ಷಗಾನ ರಂಗ ನಿರ್ದೇಶಕ ಇವರಿಂದ **ಯಕ್ಷಗಾನದಲ್ಲಿ ಪಾತ್ರ, ಬಣ್ಣಗಾರಿಕೆ, ವೇಷಭೂಷಣ** ಎಂಬ ವಿಷಯದ ಬಗ್ಗೆ ವಿಶೇಷ ಉಪನ್ಯಾಸವನ್ನು ನಡೆಸಲಾಯಿತು.

ಯಕ್ಷಗಾನ ಅಧ್ಯಯನ ಕೇಂದ್ರದ ಸಂಯೋಜಕ ಡಾ.ಧನಂಜಯ ಕುಂಬ್ಳೆ ಅವರು ಕೇಂದ್ರದ ಕಾರ್ಯಯೋಜನೆಯ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು. ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲ ಪ್ರೊ.ಸತ್ಯನಾರಾಯಣ ಭಟ್ ಅವರು ವಹಿಸಿದ್ದರು. ಕೇಂದ್ರದ ಸಂಶೋಧನ ಸಹಾಯಕ ಶ್ರೀ ಸತೀಶ್ ಕೊಣಾಜೆ ಅವರು ಉಪಸ್ಥಿತರಿದ್ದರು.

6. ಸಹಯೋಗದ ಕಾರ್ಯಕ್ರಮಗಳು

ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಯಕ್ಷಗಾನ ಅಧ್ಯಯನ ಕೇಂದ್ರವು ವಿವಿಧ ಸಂಘ ಸಂಸ್ಥೆಗಳ ಸಹಭಾಗಿತ್ವದಲ್ಲಿ ಯಕ್ಷಗಾನಕ್ಕೆ ಸಂಬಂಧಿಸಿದ ವಿಚಾರಗೋಷ್ಠಿ, ತಾಳಮದ್ದಳೆ, ಪ್ರದರ್ಶನ, ಕಮ್ಮಟ, ಪ್ರಾತ್ಯಕ್ಷಿಕೆ, ಶಿಬಿರ ಇತ್ಯಾದಿ ಕಾರ್ಯಕ್ರಮಗಳನ್ನು ವಿವಿಧೆಡೆ ಏರ್ಪಡಿಸಿದ್ದು, ವಿವರಗಳು ಕೆಳಗಿನಂತಿವೆ.

6.1 ಯಕ್ಷಾಂಬಾರಾಧನಮ್ – 2016: ಶ್ರೀ ಯಕ್ಷದೇವ ಮಿತ್ರ ಕಲಾಮಂಡಳಿ(ರಿ), ಬೆಳುವಾಯಿ, ಮೂಡಬಿದಿರೆ ಇದರ ಸಹಭಾಗಿತ್ವದಲ್ಲಿ **ಯಕ್ಷಾಂಬಾರಾಧನಮ್ – 2016,** ಯಕ್ಷಗಾನ ತಾಳಮದ್ದಳೆ ವಿಚಾರಗೋಷ್ಠಿ (ಕಮ್ಮಟ) ಕಾರ್ಯಕ್ರಮವನ್ನು 2016, ಜುಲೈ 26ರಿಂದ 31ರವರೆಗೆ ಪದ್ಮಾವತಿ ಕಲಾ ಮಂದಿರ, ಮೂಡಬಿದಿರೆಯಲ್ಲಿ ಏರ್ಪಡಿಸಲಾಯಿತು.

ಕಾರ್ಯಕ್ರಮದಲ್ಲಿ ವಿದ್ವಾಂಸರಾದ ಡಾ.ಎಂ.ಪ್ರಭಾಕರ ಜೋಶಿ ಹಾಗೂ ಶ್ರೀ ವಾಸುದೇವರಂಗ ಭಟ್ ಅವರು 'ತಾಳಮದ್ದಳೆ ಅರ್ಥಗಾರಿಕೆ' ವಿಚಾರಗೋಷ್ಠಿಯಲ್ಲಿ ಸಂಪನ್ಮೂಲವ್ಯಕ್ತಿಗಳಾಗಿ ಭಾಗವಹಿಸಿದ್ದರು. ಸುಮಾರು ಆರು ಮಂದಿ ತಾಳಮದ್ದಳೆಯ ಆಸಕ್ತರೊಂದಿಗೆ ತಾಳಮದ್ದಳೆಯ ವಿಭಿನ್ನ ಆಯಾಮಗಳ ಸಂವಾದ, ಪ್ರಸಂಗಪದ್ಯಗಳ ಹಿನ್ನೆಲೆಯಲ್ಲಿ ನಡೆಯಿತು.

6.2 ವಾಲಿ ಮೋಕ್ಷ: ಮಣಿ ಕೃಷ್ಣಸ್ವಾಮಿ ಅಕಾಡೆಮಿ(ರಿ), ಸನಾತನ ನಾಟ್ಯಾಲಯ, ಮಂಗಳೂರು ಇವರ ಸಹಭಾಗಿತ್ವದಲ್ಲಿ **ವಾಲಿ ಮೋಕ್ಷ** ಎಂಬ ಪಾರಂಪರಿಕ ತೆಂಕುತಿಟ್ಟು ಯಕ್ಷಗಾನ ಬಯಲಾಟವನ್ನು 2016, ಸಪ್ಟೆಂಬರ್ 25ರಂದು ಮಂಗಳೂರಿನ ಶ್ರೀದೇವಿ ಕಾಲೇಜು ರಸ್ತೆ, ಬಲ್ಲಾಳ್‌ಬಾಗ್, ಸನಾತನ ನಾಟ್ಯಾಲಯದ ಸಭಾಂಗಣದಲ್ಲಿ ಏರ್ಪಡಿಸಲಾಯಿತು.

6.3 ಮುಖವರ್ಣಿಕೆ ಬಣ್ಣಗಾರಿಕಾ ಶಿಬಿರ: ಶ್ರೀ ಸೋಮನಾಥೇಶ್ವರ ಯಕ್ಷನಿಧಿ(ರಿ), ಪೊಕೋ್ಡಿ, ಪೇಜಾವರ ಇದರ ಸಹಭಾಗಿತ್ವದಲ್ಲಿ **ಮುಖವರ್ಣಿಕೆ ಬಣ್ಣಗಾರಿಕಾ ಶಿಬಿರ**ವನ್ನು ದಿನಾಂಕ: 02.10.2016ರಂದು ಪೊಕೋ್ಡಿ ಸಮುದಾಯ ಭವನದಲ್ಲಿ ಏರ್ಪಡಿಸಲಾಯಿತು.

ಕಾರ್ಯಕ್ರಮವನ್ನು ಭಾರತ್ ಬೀಡಿ ಕಂಟ್ರಾಕ್ಟರ್ ಜೋಕಟ್ಟೆ ಮಹಾಬಲ ಡಿ. ಶೆಟ್ಟಿ ಅವರು ಉದ್ಘಾಟಿಸಿದರು. ಯಕ್ಷಗಾನ ಅಧ್ಯಯನ ಕೇಂದ್ರದ ಸಂಶೋಧನ ಅಧಿಕಾರಿ ಡಾ.ರಾಜಶ್ರೀ ಕೇಂದ್ರದ ಯೋಜನೆಗಳ ಬಗ್ಗೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಸುಮಾರು ಐವತ್ತು ಮಂದಿ ವಿದ್ಯಾರ್ಥಿಗಳು ಸ್ವತ: ಮುಖಕ್ಕೆ ಬಣ್ಣ ಹಚ್ಚಿ, ವಿಭಿನ್ನ ಪಾತ್ರಗಳ ಬಣ್ಣಗಾರಿಕೆಯ ವೈವಿಧ್ಯದ ತಿಳುವಳಿಕೆಯನ್ನು ಸಂಪನ್ಮೂಲವ್ಯಕ್ತಿಗಳಿಂದ ಪಡೆದುಕೊಂಡರು.

6.4 ದೈವಾರಾಧಕರ ಪ್ರಥಮ ಸಮಾವೇಶ – 2016: ದೈವಾರಾಧಕರ ಕೂಟ ಕೇಂದ್ರ ಸಮಿತಿ, ಪುತ್ತೂರು ಇದರ ಸಹಭಾಗಿತ್ವದಲ್ಲಿ **ದೈವಾರಾಧಕರ ಪ್ರಥಮ ಸಮಾವೇಶ – 2016,** ದೈವಾರಾಧನೆ ಮತ್ತು ಯಕ್ಷಗಾನ ಕುರಿತ **ವಿಚಾರಗೋಷ್ಠಿ** ನವೆಂಬರ್ 27, 2016ರಂದು ಶ್ರೀ ಮಹಾಲಿಂಗೇಶ್ವರ ದೇವಾಲಯ ವಠಾರ, ಪುತ್ತೂರಿನಲ್ಲಿ ಏರ್ಪಡಿಸಲಾಯಿತು.

ಕಾರ್ಯಕ್ರಮದ ಉದ್ಘಾಟನೆಯನ್ನು ಪುತ್ತೂರಿನ ಶ್ರೀ ಮಹತೋಭಾರ ಮಹಾಲಿಂಗೇಶ್ವರ ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷರಾದ ಶ್ರೀ ಸುಧಾಕರ ಶೆಟ್ಟಿ ಎನ್. ಇವರು ನೆರವೇರಿಸಿದರು. ದೈವಾರಾಧಕರ ಕೂಟ ಕೇಂದ್ರ ಸಮಿತಿಯ ಗೌರವಾಧ್ಯಕ್ಷರಾದ ಬ್ರಹ್ಮಶ್ರೀ ರವೀಶ ತಂತ್ರಿ ಕುಂಟಾರು ಅವರು ಪ್ರಾಸ್ತಾವಿಕ ಭಾಷಣವನ್ನು ಮಾಡಿದರು. ಹಿರಿಯ ಸಾಹಿತಿ ವಿದ್ವಾಂಸರಾದ ಡಾ.ಏರ್ಯ ಲಕ್ಷ್ಮೀನಾರಾಯಣ ಆಳ್ವ ಇವರು ದಿಕ್ಸೂಚಿ ಭಾಷಣ ಮಾಡಿದರು. ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ವಿಜೇತ ಹಿರಿಯ ದೈವ ನರ್ತಕರಾದ ಶ್ರೀ ಲೋಕಯ್ಯ ಸೇರಾ ಧ್ವಜಾರೋಹಣ ನೆರವೇರಿಸಿದರು. ವಸ್ತು ಪ್ರದರ್ಶನ ಮಳಿಗೆಯನ್ನು ಶ್ರೀ ರಾಮಜಾಲು ಗರಡಿ, ಪರ್ಪುಂಜದ ಆಡಳಿತ ಮೊಕ್ತೇಸರರಾದ ಶ್ರೀ ಕೂರೇಲು ಸಂಜೀವ ಪೂಜಾರಿ ಅವರು ಉದ್ಘಾಟಿಸಿದರು. ಕೇಂದ್ರದ ಸಂಯೋಜಕರಾದ ಡಾ. ಧನಂಜಯ ಕುಂಬ್ಳೆ ಇವರು ಉಪನ್ಯಾಸ ನೀಡಿದರು.

6.5 ಜೋಶಿ ಶತಮಾನೋತ್ಸವ ಸಮ್ಮಾನ: ಉಡುಪಿಯ ರಸಿಕ ರತ್ನ ವಿಟ್ಲ ಜೋಶಿ ಪ್ರತಿಷ್ಠಾನ(ರಿ) ಸಂಸ್ಥೆಯ ಸಹಭಾಗಿತ್ವದಲ್ಲಿ **ಜೋಶಿ ಶತಮಾನೋತ್ಸವ ಸಮ್ಮಾನ** ಕಾರ್ಯಕ್ರಮದಲ್ಲಿ 2016, ಡಿಸೆಂಬರ್ 24, 25ರಂದು ಉಡುಪಿಯ ರಾಜಾಂಗಣದಲ್ಲಿ ವಿಭಿನ್ನ ಹಾಸ್ಯ ಪಾತ್ರಗಳ ಮುಖವರ್ಣಿಕೆಯ ಪ್ರಾತ್ಯಕ್ಷಿಕೆ, ಹಾಸ್ಯಹಬ್ಬ, ಯಕ್ಷಗಾನ ಪ್ರದರ್ಶನ ಇತ್ಯಾದಿ ಕಾರ್ಯಕ್ರಮಗಳು ನಡೆದವು.

ಕಾರ್ಯಕ್ರಮವನ್ನು ಪರ್ಯಾಯ ಪೇಜಾವರ ಶ್ರೀ ವಿಶ್ವೇಶತೀರ್ಥ ಸ್ವಾಮೀಜಿ ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಪೇಜಾವರ ಕಿರಿಯ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ, ನಿವೃತ್ತ ಪ್ರಾಂಶುಪಾಲ ಪಿ.ವಾಸುದೇವ ರಾವ್, ಅಂಬಲಪಾಡಿ ಬಿಲ್ಲವ ಸಮಾಜದ ಅಧ್ಯಕ್ಷ ಗೋಪಾಲ ಸಿ. ಬಂಗೇರ, ಸಾವಿತ್ರಿ ಜೋಶಿ ಹಾಗೂ ಪ್ರತಿಷ್ಠಾನದ ಅಧ್ಯಕ್ಷ ಡಾ.ಹರೀಶ್ ಜೋಶಿ, ತಲ್ಲೂರು ಫ್ಯಾಮಿಲಿ ಟ್ರಸ್ಟ್‌ನ ಪ್ರವರ್ತಕ ತಲ್ಲೂರು ಶಿವರಾಮ ಶೆಟ್ಟಿ ಮೊದಲಾದವರು ಉಪಸ್ಥಿತರಿದ್ದರು.

7. ಕಲಾವಿದರ ಮಾಹಿತಿ ಸಂಗ್ರಹ ಯೋಜನೆ

ಮಂಗಳೂರು ವಿಶ್ವವಿದ್ಯಾನಿಲಯದ ಡಾ.ಪಿ.ದಯಾನಂದ ಪೈ ಮತ್ತು ಶ್ರೀ ಪಿ.ಸತೀಶ್ ಪೈ ಯಕ್ಷಗಾನ ಅಧ್ಯಯನ ಕೇಂದ್ರವು ಯಕ್ಷಗಾನದ ಅಧ್ಯಯನ, ಸಂವರ್ಧನೆ, ಸಂರಕ್ಷಣೆ ಮತ್ತು ಬೆಳವಣಿಗೆಗಾಗಿ ಯಕ್ಷಗಾನಕ್ಕೆ ಸಂಬಂಧಪಟ್ಟ ಪ್ರಚಾರೋಪನ್ಯಾಸ, ಪ್ರಾತ್ಯಕ್ಷಿಕೆ, ಪ್ರದರ್ಶನ, ವಿಚಾರಸಂಕಿರಣ, ಕಾರ್ಯಾಗಾರ ಮೊದಲಾದ ಕಾರ್ಯಯೋಜನೆಗಳನ್ನು ಹಮ್ಮಿಕೊಂಡು ಮುನ್ನಡೆಯುತ್ತಿದೆ. ಇದರೊಂದಿಗೆ ಪ್ರಸ್ತುತ ವರ್ಷದಲ್ಲಿ ಕೇಂದ್ರವು ಸಂಶೋಧಕರಿಗೆ, ವಿದ್ಯಾರ್ಥಿಗಳಿಗೆ, ಕಲಾವಿದರಿಗೆ ಹಾಗೂ ಸಾರ್ವಜನಿಕರಿಗೆ ಅಧ್ಯಯನಕ್ಕೆ ಅನುಕೂಲಕರವಾಗುವಂತೆ ತೆಂಕು ಮತ್ತು ಬಡಗುತಿಟ್ಟು ಯಕ್ಷಗಾನದ ವೃತ್ತಿ, ಹವ್ಯಾಸಿ, ಹಿಮ್ಮೇಳ ಕಲಾವಿದರು, ತಾಳಮದ್ದಳೆ ಕಲಾವಿದರು, ಯಕ್ಷಗಾನ ಸಂಘಟಕರು, ಸಂಗ್ರಾಹಕರು, ಯಕ್ಷಗಾನ ಕ್ಷೇತ್ರದ ಕುರಿತ ಅಧ್ಯಯನಕಾರರ ಮಾಹಿತಿಯನ್ನು ಸಂಗ್ರಹಿಸುವ ಮಹತ್ತ್ವಪೂರ್ಣ ಯೋಜನೆಯನ್ನು ಕೈಗೆತ್ತಿಕೊಂಡಿದೆ. ಕಲಾವಿದರ ಮಾಹಿತಿ ಸಂಗ್ರಹ ಯೋಜನೆಗೆ ಸಂಬಂಧಿಸಿದಂತೆ ಈಗಾಗಲೇ ಪ್ರಶ್ನಾವಳಿ ಮಾದರಿಯನ್ನು ತಯಾರಿಸಿ ಜಿಲ್ಲೆಯ ಬೇರೆಬೇರೆ ಕಡೆ ನಡೆಯುವ ಪ್ರದರ್ಶನ, ಕಮ್ಮಟ, ಕಾರ್ಯಾಗಾರಗಳಲ್ಲಿ ಭಾಗವಹಿಸಿ ಯಕ್ಷಗಾನ ಕಲಾವಿದರಿಂದ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ. ಅಲ್ಲದೇ ಈ ಬಗ್ಗೆ ಪತ್ರಿಕೆಗಳಲ್ಲಿಯೂ ಮಾಹಿತಿ ನೀಡಿ ಕಲಾವಿದ ವಿವರವನ್ನು ಅಂಚೆ ಹಾಗೂ ಇ–ಮೇಲ್‌ನ ಮೂಲಕ ಸಂಗ್ರಹಿಸುವ ಕೆಲಸ ಮಾಡಲಾಗಿದೆ.

ಕಲಾವಿದರ ಮಾಹಿತಿ ಸಂಗ್ರಹ ಕಾರ್ಯದಲ್ಲಿ ಕೇಂದ್ರದ **ಯಕ್ಷಮಂಗಳ** ತಂಡದ ವಿದ್ಯಾರ್ಥಿಗಳು ಕೂಡಾ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಅಕ್ಟೋಬರ್ 29, 2016ರಂದು ಸುಳ್ಯ ತಾಲೂಕಿನ ಸಂಪಾಜೆಯ ಡಾ.ಕೀಲಾರು ಗೋಪಾಲಕೃಷ್ಣಯ್ಯ ಪ್ರತಿಷ್ಠಾನ(ರಿ) – ಇದರ ವತಿಯಿಂದ ನಡೆದ ಯಕ್ಷೋತ್ಸವ ಕಾರ್ಯಕ್ರಮದಲ್ಲಿ **ಯಕ್ಷಮಂಗಳ** ವಿದ್ಯಾರ್ಥಿಗಳು ಕಲಾವಿದರ ಮಾಹಿತಿಯನ್ನು ಸಂಗ್ರಹಿಸಿದ್ದಾರೆ.

8. ಯಕ್ಷಮಂಗಳ ವೀಡಿಯೋ ಪ್ರದರ್ಶನ ಮಂದಿರ

ಯಕ್ಷಗಾನ ಅಧ್ಯಯನ ಕೇಂದ್ರವು ಸುಸಜ್ಜಿತವಾದ ಹವಾನಿಯಂತ್ರಿತ ವಸ್ತು ಸಂಗ್ರಹಾಲಯವನ್ನು ಹೊಂದಿದೆ. ಇದರೊಂದಿಗೆ ಯಕ್ಷಗಾನ ಸಾಕ್ಷ್ಯಚಿತ್ರ ಮತ್ತು ದೃಶ್ಯಶ್ರವ್ಯ ಸಿಡಿಗಳನ್ನು ಪ್ರದರ್ಶಿಸಲು ವೀಡಿಯೋ ಪ್ರದರ್ಶನ ಮಂದಿರವನ್ನು ರೂಪಿಸಲಾಗಿದ್ದು, ಮಿನಿಥಿಯೇಟರ್ ರೂಪದಲ್ಲಿರುವ ಈ ವೀಡಿಯೋ ಪ್ರದರ್ಶನ ಕೇಂದ್ರವು ಯಕ್ಷಗಾನದ ಪರಂಪರೆಯ ತಿಳುವಳಿಕೆಯನ್ನು ಮಕ್ಕಳಲ್ಲಿ ಮತ್ತು ಆಸಕ್ತರಲ್ಲಿ ಉಳಿಸಿಬೆಳೆಸುವಲ್ಲಿ ಅತ್ಯಂತ ಯಶಸ್ವಿಯಾಗಿದೆ.

9. ಯಕ್ಷಮಂಗಳ ವಸ್ತುಸಂಗ್ರಹಾಲಯ

ಮಂಗಳೂರು ವಿಶ್ವವಿದ್ಯಾನಿಲಯದ ಡಾ.ಪಿ.ದಯಾನಂದ ಪೈ ಮತ್ತು ಶ್ರೀ ಪಿ.ಸತೀಶ್ ಪೈ ಯಕ್ಷಗಾನ ಅಧ್ಯಯನ ಕೇಂದ್ರದಲ್ಲಿ ಸುಸಜ್ಜಿತ ಹಾಗೂ ಅನನ್ಯವಾದ ಮಾದರಿ **ಯಕ್ಷಮಂಗಳ ವಸ್ತುಸಂಗ್ರಹಾಲಯ**ವಿದೆ. ಇಲ್ಲಿ ಯಕ್ಷಗಾನದ ಹಿಮ್ಮೇಳ ಹಾಗೂ ಮುಮ್ಮೇಳಕ್ಕೆ ಸಂಬಂಧಿಸಿದಂತೆ ಯಕ್ಷಗಾನದ ವಿವಿಧ ವೇಷಗಳ ಮಾದರಿಗಳು, ಮುಖವಾಡಗಳು, ವಿವಿಧ ವೇಷಗಳಿಗೆ ಅನುಸಾರವಾಗಿ ವಿವಿಧ ವಿನ್ಯಾಸದ ಕಿರೀಟಗಳು, ಮುಖವರ್ಣಿಕೆಗಳು – ಹೀಗೆ ತೆಂಕುತಿಟ್ಟು ಹಾಗೂ ಬಡಗುತಿಟ್ಟು ಯಕ್ಷಗಾನಕ್ಕೆ ಸಂಬಂಧಿಸಿದಂತೆ ಬೇರೆ ಬೇರೆ ಮಾದರಿಗಳ ಪ್ರತಿಕೃತಿಗಳಿವೆ.

ಈ ವಸ್ತುಸಂಗ್ರಹಾಲಯಕ್ಕೆ ವಿದ್ಯಾರ್ಥಿಗಳು, ಕಲಾವಿದರು, ಸಂಶೋಧಕರು, ಆಸಕ್ತರು, ಗಣ್ಯವ್ಯಕ್ತಿಗಳು ಭೇಟಿ ನೀಡುತ್ತಿದ್ದಾರೆ. ಇವರಿಗೆ ಯಕ್ಷಗಾನದ ವೈವಿಧ್ಯ, ಮುಖವರ್ಣಿಕೆ, ವೇಷಭೂಷಣಗಳ ವ್ಯತ್ಯಾಸ, ವೈಶಿಷ್ಟ್ಯಗಳ ಕುರಿತ ಮಾಹಿತಿ ಹಾಗೂ ಸೂಕ್ತ ಮಾರ್ಗದರ್ಶನವನ್ನು ನೀಡಲಾಗುತ್ತಿದೆ. ಈ ವಸ್ತುಸಂಗ್ರಹಾಲಯದ ಎಲ್ಲಾ ರೀತಿಯ ನಿರ್ವಹಣೆಯನ್ನು ಸಮರ್ಥವಾಗಿ ಮಾಡಲಾಗುತ್ತಿದೆ.

10. ಯಕ್ಷವಾಙ್ಮಯ ಕೇಂದ್ರ/ಪೇಪರ್ ಕಟ್ಟಿಂಗ್ಸ್

